# ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ ಮಲ್ಲೇಶ್ವರಂ, ಬೆಂಗಳೂರು–560003.

## KARNATAKA SECONDARY EDUCATION EXAMINATION BOARD

ಮಾದರಿ ಪ್ರಶ್ನೆಪತ್ರಿಕೆ 2021–22

ವಿಷಯದ ಸಂಕೇತ: 01K — ಗರಿಷ್ಠ ಅಂಕಗಳು : 100

ವಿಷಯ : ಪ್ರಥಮ ಭಾಷೆ ಕನ್ನಡ — **With Key Answers** — ಸಮಯ: 3 ಗಂಟೆ 15 ನಿ.ಗಳು

---

I ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ. 6x1=6

**1. ಪ್ರಶ್ನೆರೂಪದ ಪದ ಮತ್ತು ವಾಕ್ಯಗಳ ಮುಂದೆ ಈ ಚಿಹ್ನೆಯನ್ನು ಬಳಸಲಾಗುವುದು.**

ಎ) ಉದ್ಧರಣ  ಬಿ) ಅರ್ಧವಿರಾಮ  ಸಿ) ಪ್ರಶ್ನಾರ್ಥಕ  ಡಿ) ಆವರಣ

ಉತ್ತರ: ಸಿ) ಪ್ರಶ್ನಾರ್ಥಕ

**2. ಮನಸ್ಸಿನಲ್ಲಿ ಉಂಟಾಗುವ ಕೋಪ, ಹರ್ಷ, ದುಃಖ, ಮೆಚ್ಚುಗೆ, ಆಕ್ಷೇಪ, ತಿರಸ್ಕಾರ ಇತ್ಯಾದಿ ಭಾವಗಳನ್ನು ವ್ಯಕ್ತಪಡಿಸುವಾಗ ಅರ್ಥವಿಲ್ಲದ ಕೆಲವು ಪದಗಳನ್ನು ಬಳಸುತ್ತೇವೆ. ಅಂತಹ ಪದಗಳನ್ನು ಹೀಗೆನ್ನುವರು.**

ಎ) ಭಾವಸೂಚಕಾವ್ಯಯ  ಬಿ) ಅನುಕರಣಾವ್ಯಯ  ಸಿ) ಸಾಮಾನ್ಯಾವ್ಯಯ  ಡಿ) ಸಂಬಂಧಾರ್ಥಕಾವ್ಯಯ

ಉತ್ತರ: ಎ) ಭಾವಸೂಚಕಾವ್ಯಯ

**3. 'ಸುರಾಸುರ' ಪದವು ಈ ಸಂಧಿಗೆ ಉದಾಹರಣೆಯಾಗಿದೆ.**

ಎ) ಲೋಪ ಸಂಧಿ  ಬಿ) ಆಗಮ ಸಂಧಿ  ಸಿ) ಆದೇಶ ಸಂಧಿ  ಡಿ) ಸವರ್ಣದೀರ್ಘ ಸಂಧಿ

ಉತ್ತರ: ಡಿ) ಸವರ್ಣದೀರ್ಘ ಸಂಧಿ

**4. ಚತುರ್ಥೀ ವಿಭಕ್ತಿಗೆ ಉದಾಹರಣೆಯಾದ ಪ್ರತ್ಯಯ ಇದು**

ಎ) ಉ  ಬಿ) ಗೆ, ಕೆ, ಕ್ಕೆ  ಸಿ) ಅನ್ನು  ಡಿ) ಇಂದ

ಉತ್ತರ: ಬಿ) ಗೆ, ಕೆ, ಕ್ಕೆ

**5. ನಿಷೇಧಾರ್ಥಕ ಕ್ರಿಯಾಪದವಿದು**

ಎ) ನೋಡಲಿ  ಬಿ) ನೋಡಿಯಾರು  ಸಿ) ನೋಡಿದರು  ಡಿ) ನೋಡರು

ಉತ್ತರ: ಡಿ) ನೋಡರು

**6. ಕನ್ನಡ ವರ್ಣಮಾಲೆಯಲ್ಲಿರುವ ಅನುನಾಸಿಕ ಅಕ್ಷರಗಳ ಸಂಖ್ಯೆ**

ಎ) 05  ಬಿ) 06  ಸಿ) 09  ಡಿ) 02  ಉತ್ತರ: ಎ) 05

**II ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ. 4x1=4**

7. ವಿದ್ಯೆ : ಬಿಜ್ಜೆ : : ಪ್ರಸಾದ : ________ ಉತ್ತರ: ಹಸಾದ

8. ನಡೆ ನಡೆ : ದ್ವಿರುಕ್ತಿ : : ಸತಿಪತಿ : ________ ಉತ್ತರ: ಜೋಡುನುಡಿ

9. ಅಂಗೈ : ಅಂಶಿ ಸಮಾಸ : : ಮೈಮುಚ್ಚು : ________ ಉತ್ತರ: ಕ್ರಿಯಾ ಸಮಾಸ

10. ಅರ್ತಿ : ಪ್ರೀತಿ : : ಅಬ್ಬೆ : ________ ಉತ್ತರ: ತಾಯಿ

**III ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **7x1=7**

11. ರಾಹಿಲನು ಯಾರು?
**ಉತ್ತರ:** ಸ್ವಪ್ನದಲ್ಲಿದ್ದ ವೈದ್ಯ, ಅವನೇ – **ರಾಹಿಲ್.**

12. ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಯಾರು?
**ಉತ್ತರ:** ಮತಂಗಾಶ್ರಮದಲ್ಲಿ ವಾಸವಿದ್ದ **ತಪಸ್ವಿನಿ – ಶಬರಿ**

13. ಲಂಡನ್ನಿನ ಪೇಟೆಯಲ್ಲಿರುವ ಸ್ಟೇಷನರಿ ಅಂಗಡಿಯ ಹೆಸರೇನು?
**ಉತ್ತರ:** ಲಂಡನ್ನಿನ ಪೇಟೆಯಲ್ಲಿರುವ ಸ್ಟೇಷನರಿ ಅಂಗಡಿಯ ಹೆಸರು– **ವೂಲವರ್ಥ ಅಂಗಡಿ**

14. ಧರ್ಮಬುದ್ಧಿಯು ತನ್ನ ಬೆಳಗಿನ ಹೊತ್ತನ್ನು ಹೇಗೆ ಕಳೆದನು?
**ಉತ್ತರ:** ಧರ್ಮಬುದ್ಧಿಯು ತನ್ನ ಬೆಳಗಿನ ಹೊತ್ತನ್ನು **ದೇವರು, ಗುರುಗಳು ಹಾಗೂ ವೇದಾಧ್ಯಯನ** ನಿರತರನ್ನು **ಪೂಜಿಸುತ್ತಾ** ಬೆಳಗಿನ ಹೊತ್ತು ಕಳೆದನು.

15. ಹಲಗಲಿ ಗ್ರಾಮ ಗುರುತು ಉಳಿಯದಂತಾದುದು ಏಕೆ?
**ಉತ್ತರ:** ಹಲಗಲಿಯ ಮೇಲೆ ಬ್ರಿಟಿಷರ ಸರ್ಕಾರದ ದಂಡು ದಾಳಿ ಮಾಡಿ,ಬೆಂಕಿ ಹಚ್ಚಿದ್ದರಿಂದ– **ಹಲಗಲಿಯ ಗುರುತು ಉಳಿಯದಂತಾಯ್ತು.**

16. ಅಶ್ವಿನಿ ದೇವತೆಗಳ ವರಬಲದಿಂದ ಜನಿಸಿದವರು ಯಾರು?
**ಉತ್ತರ:** ಅಶ್ವಿನೀದೇವತೆಗಳ ವರಬಲದಿಂದ ಜನಿಸಿದವರು **ನಕುಲ ಮತ್ತು ಸಹದೇವ.**

17. ವಿವೇಕಾನಂದರನ್ನು **'ಮಾನವತಾಮಿತ್ರ'**ರೆಂದು ಕರೆದವರಾರು?
**ಉತ್ತರ:** ವಿವೇಕಾನಂದರನ್ನು 'ಮಾನವತಾಮಿತ್ರ'ರೆಂದು ಕರೆದವರು **ಕುವೆಂಪು**

**IV ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **10x2=20**

**18. 'ವೂಲವರ್ಥ' ಅಂಗಡಿಯಲ್ಲಿ ಸಿಗುವ ವಸ್ತುಗಳಾವುವು?**
**ಉತ್ತರ:** 'ವೂಲವರ್ಥ'ಎಂಬ **'ಸ್ಟೇಷನರಿ'** ಅಂಗಡಿಯಲ್ಲಿ ಎಲ್ಲ ತರದ ಸಾಮಾನುಗಳನ್ನು ಇಲ್ಲಿ ಒಂದು ಪೆನ್ನಿಯಿಂದ ಆರು ಪೆನ್ನಿಯವರೆಗೆ ಮಾರುತ್ತಾರೆ. ಈ ಅಂಗಡಿಯನ್ನು ನಿರ್ಮಿಸಿದ ಬುದ್ಧಿಯ ಚಮತ್ಕಾರವು ನೋಡತಕ್ಕಂತಹುದು. ಪ್ರಾಚೀನ ಮಹಾಕಾವ್ಯದಂತೆ ಇದೊಂದು ಮಹಾಕೋಶವಾಗಿದೆ. ಬೂಟು, ಕಾಲುಚೀಲ, ಚಡ್ಡಿ, ಸಾಬೂನು, ಔಷಧ, ಪುಸ್ತಕ, ಅಡಿಗೆಯ ಪಾತ್ರೆ, ಇಲೆಕ್ಟ್ರಿಕ್ ದೀಪದ ಸಾಮಾನು, ಫೋಟೋ, ಅಡವಿಯ ಹೂವು, ಯುದ್ಧಸಾಮಗ್ರಿ ಎಲ್ಲವೂ ಇಲ್ಲಿ ದೊರೆಯುತ್ತವೆ.

**19. ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯನವರ ಅಭಿಪ್ರಾಯವೇನು?**
**ಉತ್ತರ:** ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯ ಅವರು "ಆಧುನಿಕ ಶಿಕ್ಷಣವೇ ಎಲ್ಲ ಸಮಸ್ಯೆಗಳಿಗೂ ಪರಮೋಚ್ಚ ಪರಿಹಾರ, ಶಿಕ್ಷಣವು ಸಂಜೀವಿನಿಯಂತೆ ಎಂದು, ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು. ಅದು ಕೆಲವೇ ಜನರ ಸೊತ್ತಾಗದೆ ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆಜನ್ಮಸಿದ್ಧ ಹಕ್ಕಾಗಬೇಕು" ಎಂದು ಹೇಳಿದ್ದಾರೆ.

**20. ವಚನಕಾರರ ದೃಷ್ಟಿಯಲ್ಲಿ ಅರಿವು ಎಂದರೇನು?** ವಿವರಿಸಿ.
**ಉತ್ತರ:** ವಚನಕಾರರ ದೃಷ್ಟಿಯಲ್ಲಿ ಅರಿವು ಅಂದರೆ ತನ್ನಷ್ಟಕ್ಕೆ ತಾನು ಇರುವ ಕೇವಲ ತಿಳಿವಳಿಕೆ, ಜ್ಞಾನ ಮಾತ್ರ ಅಲ್ಲ. ಅದು ಕ್ರಿಯೆಯ ಅನುಭವದಿಂದ ಒಡಮೂಡಿ ಬರುವುದು. ಅದು ಕೇಳಿ ತಿಳಿದಿದ್ದಲ್ಲ. ಕ್ರಿಯೆಯಲ್ಲಿ ಮೂಡಿದ ತಿಳಿವಳಿಕೆ. ಅದು ತರ್ಕವಲ್ಲ. ನಡೆಯಿಂದ ನುಡಿ ಹುಟ್ಟಿದರೆ ಅದು ಅರಿವು ಎಂದು ಹೇಳಲಾಗಿದೆ.

**21. ವಚನಕಾರರಿಗೆ ಯಾವುದು ದೇವರಾಗಿತ್ತು?** ವಿವರಿಸಿ.
ವಚನಕಾರರು ನಮ್ಮ ಸುತ್ತಮುತ್ತ ಇರುವ ದೇವರುಗಳನ್ನು ದೇವರು ಅಂದುಕೊಂಡಿರಲಿಲ್ಲ. ಪ್ರತಿಯೊಬ್ಬ ವಚನಕಾರರಿಗೂ ಅವರವರದೇ ಇಷ್ಟದೈವ ಹೊಂದಿದ್ದರು. ಅಂದರೆ ಅವರಿಗೆ ಅವರವರ ಪ್ರಜ್ಞೆಯೇ ದೇವರಾಗಿತ್ತು. ಅವರು ತಮ್ಮ ಕಷ್ಟ ಸುಖ, ದುಃಖ ದುಮ್ಮಾನ, ಏಳುಬೀಳುಗಳನ್ನು ಅವರ ಉತ್ಕಟ ಇಕ್ಕಟ್ಟುಗಳನ್ನು ಆ ಪ್ರಜ್ಞೆಯ ಮುಂದೆ ಹೇಳಿಕೊಳ್ಳುತ್ತಿದ್ದರು.

**22. ಹೊಸಗಾಲದ ಹಸುಮಕ್ಕಳನ್ನು ಹಕ್ಕಿ ಹೇಗೆ ಹರಸಿದೆ?**
**ಉತ್ತರ:** ಕಾಲವೆಂಬ ಹಕ್ಕಿಯು ಯುಗಯುಗಗಳ ಆಗುಹೋಗುಗಳನ್ನು ಹಿಂದಕ್ಕೆ ತಳ್ಳುತ್ತಾ ಹೊಸ ಮನ್ವಂತರದ ಪರಿವರ್ತನೆಗೆ ಕಾರಣವಾಗಿದೆ. ಹಕ್ಕಿಯು ತನ್ನ ರೆಕ್ಕೆಗಳನ್ನು ಬೀಸುವ ಮೂಲಕ ಭೂಮಂಡಲದ ಜೀವಿಗಳಿಗೆ ನವಚೈತನ್ಯ ನೀಡಿ ಹೊಸಗಾಲದ ಹಸು ಮಕ್ಕಳನ್ನು ಹರಸಿ ಉತ್ತಮ ಭವಿಷ್ಯಕ್ಕಾಗಿ ಶುಭಹಾರೈಸಿದೆ ಎಂದು ಬೇಂದ್ರೆ ವರ್ಣಿಸಿದ್ದಾರೆ.

**23. ಹಸುರು ಸಕಲೇಂದ್ರಿಯಗಳನ್ನು ವ್ಯಾಪಿಸಿದೆ ಎಂಬುದನ್ನು ಕವಿ ಹೇಗೆ ವರ್ಣಿಸಿದ್ದಾರೆ?**
**ಉತ್ತರ:** ಆಶ್ವಯುಜ ಮಾಸದ ನವರಾತ್ರಿಯಲ್ಲಿ ಪ್ರಕೃತಿಯಲ್ಲಿ ಹೆಪ್ಪುಗಟ್ಟಿದ ಹಚ್ಚಹಸುರಿನೊಂದಿಗೆ ಪ್ರಕೃತಿಯಲ್ಲಿ ಅರಳಿದ ಹೊಸ ಹೂವಿನ ಕಂಪನ್ನು ಹಸುರಿನ ಭಾವದಿಂದ ಮೂಗು ಆಘ್ರಾಣಿಸುತ್ತದೆ. ಎಲೆಗಳ ತಂಪು ಮೈಗೆ ಹಸುರು ಸ್ಪರ್ಶದ ಆನಂದವನ್ನು ನೀಡುತ್ತದೆ. ಮರಗಿಡಗಳ ಪೊದರಿನಿಂದ ಬರುವ ಹಕ್ಕಿಯ ಕೊರಲಿನ ಇಂಪು ಕಿವಿಗೆ ಆನಂದವನ್ನು ನೀಡುತ್ತದೆ. ಹೀಗೆ ಪ್ರಕೃತಿಯಲ್ಲಿ ಹೆಪ್ಪುಗಟ್ಟಿದ ಹಸುರು ಸಕಲೇಂದರಿಯಗಳನ್ನು ವ್ಯಾಪಿಸಿದೆ ಎಂದು ಕವಿ ಕುವೆಂಪುರವರು  ಹೇಳಿದ್ದಾರೆ

**24. ವಿವೇಕಾನಂದರು ಕೋಮುವಾದದ ಕಟ್ಟಾ ವಿರೋಧಿಯಾಗಿದ್ದರು. ಏಕೆ?**
**ಉತ್ತರ:** ವಿವೇಕಾನಂದರ ಧಾರ್ಮಿಕ ಚಿಂತನೆಗಳನ್ನು ಅವಲೋಕಿಸಿದಾಗ ಅವರು ಸ್ಪಷ್ಟವಾಗಿ ಕೋಮುವಾದದ ವಿರೋಧಿಯಾಗಿದ್ದರೆಂದು ತಿಳಿದು ಬರುತ್ತದೆ. ಕೋಮುವಾದವು ಏಕಧರ್ಮ ಮತ್ತು ಏಕಸಂಸ್ಕೃತಿಯೇ ಶ್ರೇಷ್ಠವೆಂದೂ, ಅದೇ ಅಂತಿಮವೆಂದೂ, ನಂಬುತ್ತ ನಂಬಿಸುತ್ತ, ಪರಮಧರ್ಮ ದ್ವೇಷವನ್ನು ಬಿತ್ತಿ ಬೆಳೆಸುತ್ತದೆ.ಇಂತಹ ಪ್ರವೃತ್ತಿಗೆ ವಿವೇಕಾನಂದರು ಕಟ್ಟಾ ವಿರೋಧಿಯಾಗಿದ್ದರು.

**25. ವಸಂತನು ಯಾರು ಯಾರಿಗೆ ಮುಖ ತೋರಲಿಲ್ಲ?**
**ಉತ್ತರ:** ಕಮ್ಮಾರನಿಗೆ, ಕುಂಬಾರನಿಗೆ, ನೇಕಾರನಿಗೆ, ಕೇರಿಯ ಮಾರನಿಗೆ ವಸಂತ ಮುಖ ತೋರಲಿಲ್ಲ.

**26. ಭಗತ್‌ಸಿಂಗ್ ತನ್ನ ಸಹೋದರಿಗೆ ಮಣ್ಣು ಯಾವುದರ ಪ್ರತೀಕ ಎಂದು ತೋರಿಸುತ್ತಾನೆ?**
**ಉತ್ತರ:** ಜಲಿಯನ್ ವಾಲಾಬಾಗ್‌ನಲ್ಲಿ ಏಪ್ರಿಲ್–13– 1919 ರಂದು ಬ್ರಿಟೀಷರ ಗುಂಡುಗಳಿಗೆ ಆಹುತಿಯಾದ ಸುಮಾರು 2000 ಮುಗ್ಧ ಹಿಂದೂ, ಸಿಖ್ ಮತ್ತು ಮುಸಲ್ಮಾನರ ಸಮ್ಮಿಳಿತ ರಕ್ತದಿಂದ ಪಾವನವಾದ ಈ ಮಣ್ಣು ತ್ಯಾಗದ ಪ್ರತೀಕ ಎಂದು ಭಗತ್‌ಸಿಂಗ್ ತನ್ನ ಸಹೋದರಿಗೆ ತೋರಿಸುತ್ತಾನೆ.

**27. ಹೊಲದಲ್ಲಿ ಹುಟ್ಟಿದ ಉತ್ತರಾಣಿ ಗಿಡ ಹಾಗೂ ಗರಿಕೆ ಹುಲ್ಲು ಕೊಡುವ ತೊಂದರೆಯನ್ನು ಜನಪದರು ಒಗಟಿನಲ್ಲಿ ಹೇಗೆ ವಿವರಿಸಿದ್ದಾರೆ?**
**ಉತ್ತರ:** "ಬದಿನಲ್ಲಿ ಹುಟ್ಟೋದು, ಬದಿನಲ್ಲಿ ಬೆಳೆಯೋದು, ಹೋಗೋರ ಮುಂಜೆರಗ ಹಿಡಿಯುವುದು–ಇದು ಉತ್ತರಾಣಿಯ ಒಗಟಿನ ಉತ್ತರವಾಗಿದೆ. ಮತ್ತು "ಹೊಲದಲ್ಲಿ ಹುಟ್ಟೋದು, ಹೊಲದಲ್ಲಿ ಬೆಳೆಯೋದು, ಉಳುವಾನ (ರೈತನ) ಕಂಡು ನಗುವುದು– ಇದು ಗರಿಕೆ ಒಗಟಿನ ಉತ್ತರವಾಗಿದೆ.

**V ಕೆಳಗಿನ ಕವಿಗಳ/ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು/ಪ್ರಶಸ್ತಿಗಳನ್ನು ಕುರಿತು ವಾಕ್ಯ ರೂಪದಲ್ಲಿ ಬರೆಯಿರಿ. 2x3=6**

**28. ಸಾರಾ ಅಬೂಬಕ್ಕರ್**

ಮಹಿಳೆಯರು ಸಾಹಿತ್ಯ ರಚನೆಯಲ್ಲಿ ತೊಡಗಿಸಿಕೊಳ್ಳುವುದು ಅಪರೂಪ ಎನ್ನುವ ಸಂದರ್ಭದಲ್ಲಿ ಬರವಣಿಗೆ ಆರಂಭಿಸಿದ ಲೇಖಕಿ ಸಾರಾ ಅಬೂಬಕ್ಕರ್ ಅವರು, ನಾಡಿನ ಖ್ಯಾತ ಕತೆಗಾರ್ತಿ ಹಾಗೂ ಕಾದಂಬರಿಗಾರ್ತಿಯಾಗಿ ಜನಪ್ರಿಯತೆ ಗಳಿಸಿರುವವರು. ಇವರು **30 ಜೂನ್ 1936ರಂದು ಕಾಸರಗೋಡಿನಲ್ಲಿ ಜನಿಸಿದರು.** ಚಂದ್ರಗಿರಿಯ ತೀರದಲ್ಲಿ, ಸಹನಾ, ಕದನ ವಿರಾಮ, ವಜ್ರಗಳು, ಸುಳಿಯಲ್ಲಿ ಇತ್ಯಾದಿ ಪ್ರಮುಖ ಕಾದಂಬರಿಗಳನ್ನು,  ಚಪ್ಪಲಿಗಳು, ಖೆದ್ದಾ, ಅರ್ಧರಾತ್ರಿಯಲ್ಲಿ ಹುಟ್ಟಿದ ಕೂಸು, ಪಯಣ ಇವು ಕಥಾ ಸಂಕಲನಗಳನ್ನು ರಚಿಸಿದ್ದಾರೆ. ಇವರ ಸಾಹಿತ್ಯ ಕೃಷಿಗಾಗಿ ಅನೇಕ ಪುರಸ್ಕಾರಗಳು ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ ನೃಪತುಂಗ ಪ್ರಶಸ್ತಿ ಲಭಿಸಿವೆ.  **ವಿಶೇಷ:** ಕರ್ನಾಟಕದ ಸಂಸ್ಕೃತಿ ಚಿಂತಕರಲ್ಲಿ ಇವರೂ ಒಬ್ಬರು.

**29. ದ.ರಾ. ಬೇಂದ್ರೆ**

**ಅಂಬಿಕಾತನಯದತ್ತ ಎಂಬ ಕಾವ್ಯನಾಮದಿಂದ ಪ್ರಸಿದ್ಧರಾಗಿರುವ** ಶ್ರೀ ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಅವರು ಕ್ರಿ. ಶ. 1896 ರಲ್ಲಿ ಧಾರವಾಡದಲ್ಲಿ ಜನಿಸಿದರು. ನವೋದಯ ಸಾಹಿತ್ಯದ ಪ್ರಮುಖ ಕವಿಗಳಲ್ಲಿ ಒಬ್ಬರಾದ **ಇವರು ಎದೆ ತುಂಬ ಹಾಡಿದೆನು,** ಗರಿ, ಉಯ್ಯಾಲೆ, ಸಖೀಗೀತ, ನಾದಲೀಲೆ, ಮೇಘದೂತ, ಗಂಗಾವತರಣ, ಸಾಹಿತ್ಯದ ವಿರಾಟ್ ಸ್ವರೂಪ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. **ಪ್ರಶಸ್ತಿಗಳು:–** ಅರಳು–ಮರಳು ಕವನ ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, **ನಾಕುತಂತಿ ಕವನ ಸಂಕಲನಕ್ಕೆ ಜ್ಞಾನಪೀಠ ಪ್ರಶಸ್ತಿ** ಅಲ್ಲದೇ ಭಾರತ ಸರ್ಕಾರದ **'ಪದ್ಮಶ್ರೀ' ಪುರಸ್ಕಾರವೂ** ಲಭಿಸಿದೆ. **ವರಕವಿ, ಶಬ್ದ ಗಾರುಡಿಗ** ಎಂಬ ಬಿರುದುಗಳನ್ನು ಹೊಂದಿದ್ದಾರೆ.

**VI ಕೆಳಗಿನ ಪದ್ಯ ಭಾಗಕ್ಕೆ ಪ್ರಸ್ತಾರ ಹಾಕಿ ಗಣ ವಿಭಾಗ ಮಾಡಿ ಛಂದಸ್ಸಿನ ಹೆಸರನ್ನು ಬರೆಯಿರಿ.** **1x3=3**

**30.**

| ಭ | ರ | ನ | ಭ | ಭ | ರ | ಲ+ಗು |
|---|---|---|---|---|---|---|
| – U U | – U – | U U U | – U U | – UU | – U – | U – |
| ಎನ್ಣಣು | ಗಾಳನೆ | ಣ್ಣಣುಗ | ದಮ್ಮನ | ನಿಕ್ಕಿದ | ಪಾರ್ಥಭೀ | ಮರು |

ಳ್ಳ

ಛಂದಸ್ಸು: ಉತ್ಪಲಮಾಲಾವೃತ್ತ

**VII ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ. ಲಕ್ಷಣ ಬರೆದು ಸಮನ್ವಯಗೊಳಿಸಿ.** **1x3=3**

**31.** ಸಿಡಿಲ ಸಿಡಿದ್ಹಾಂಗ ಗುಂಡು ಸುರಿದಾವ

**ಅಲಂಕಾರ :** ಉಪಮಾಲಂಕಾರ

**ಲಕ್ಷಣ :** ಎರಡು ವಸ್ತುಗಳಿಗೆ ಪರಸ್ಪರವಾಗಿ ಇರುವ ಹೋಲಿಕೆಯನ್ನು ಹೇಳುವುದೇ ಉಪಮಾಲಂಕಾರವೆನಿಸುತ್ತದೆ.

**ಉಪಮೇಯ :** ಗುಂಡು ಸುರಿಯುವುದು.

**ಉಪಮಾನ :** ಸಿಡಿಲು ಸಿಡಿಯುವುದು.

**ಉಪಮಾವಾಚಕ :** ಹಾಂಗ

**ಸಮಾನ ಧರ್ಮ :** ಸುರಿಯುವುದು

**ಸಮನ್ವಯ :** ಇಲ್ಲಿ ಉಪಮೇಯವಾದ ಗುಂಡು ಸುರಿಯುವುದನ್ನು ಉಪಮಾನವಾದ ಸಿಡಿಲು ಸಿಡಿಯುವುದಕ್ಕೆ ಪರಸ್ಪರ ಹೋಲಿಸಿ ವರ್ಣಿಸಲಾಗಿದೆ.

**VIII ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಡನೆ ವಿಸ್ತರಿಸಿ ಬರೆಯಿರಿ.** **1x3=3**

**32. ಕೂಡಿ ಬಾಳಿದರೆ ಸ್ವರ್ಗಸುಖ**

**ಗಾದೆಯ ಮಹತ್ವ:** 'ಗಾದೆ' ಎನ್ನುವುದು ಹೇಳಿಕೆಯ ರೂಪದಲ್ಲಿ ಬಳಕೆಯಾಗುವ ಮಾತು. ಅದು ಹಲವರ ಅನುಭವಗಳ ಮಾತು. ಲೋಕೋಕ್ತಿ, ಜಾಣನುಡಿ ಎಂದು ಹೇಳಬಹುದು. ಗಾದೆಯ ಮಾತಿನಲ್ಲಿ ತಿಳುವಳಿಕೆಯಿದೆ. ನೀತಿ ಇದೆ. ನಗೆಚಾಟಿಯಿದೆ. ಒಳಿತು ಕೆಡುಕುಗಳ ಸೂಕ್ಷ್ಮತೆಗಳಿವೆ. ಹೀಗಾಗಿಯೇ ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತಿದೆ. ನೂರು ಮಾತುಗಳಲ್ಲಿ ಹೇಳುವುದನ್ನು ಒಂದು ವಾಕ್ಯದಲ್ಲಿ ಗಾದೆ ಹೇಳಬಲ್ಲದು. ಗಾದೆ 'ಜಾನಪದ ಸಾಹಿತ್ಯ' ಪ್ರಕಾರಗಳಲ್ಲೊಂದು.

**ಉದಾಹರಣೆಯೊಂದಿಗೆ ಅರ್ಥ ವಿವರಣೆ:** ಸ್ವರ್ಗ. ನರಕ ಎಲ್ಲಿದೆಯೋ ಗೊತ್ತಿಲ್ಲ. ಆದರೆ ಸ್ವರ್ಗವು ಅತ್ಯಂತ ಆನಂದಮಯ. ಸುಖಮಯ ತಾಣವೆಂದು ಹೇಳಲಾಗುತ್ತದೆ. ಕೂಡಿಬಾಳಿದರೆ ಸ್ವರ್ಗವಂತೂ ಸತ್ಯ. ಇದರ ಅನುಭವ ಆಗಲೇಬೇಕು. ಕೂಡಿ ಬಾಳುವುದೆಂದರೆ ಎಲ್ಲ ಭಿನ್ನಾಭಿಪ್ರಾಯಗಳನ್ನು, ಮತ-ಭೇದವನ್ನು ಮರೆತು ಎಲ್ಲ ತರಹದ ಮೇಲು-ಕೀಳು ಮುಂತಾದ ಭಾವನೆಗಳನ್ನು ಬದಿಗೊತ್ತಿ ಬದುಕುವುದು. ಈಗಿನ ಕಾಲದಲ್ಲಿ ಇದು ಬಹಳ ಕಠಿಣವಾಗಿ ಪರಿಣಮಿಸಿದೆ.ಹಿಂದೆ ಕೂಡು(ಅವಿಭಕ್ತ) ಕುಟುಂಬಗಳಿದ್ದಾಗ ಕುಟುಂಬದಲ್ಲಿ ಸಾಮರಸ್ಯ, ಅನ್ಯೋನ್ಯತೆ ಇದ್ದು ಜೀವನದ ಕಷ್ಟಗಳನ್ನು ಒಬ್ಬರಿಗೊಬ್ಬರು ಹಂಚಿಕೊಂಡು ಬಾಳುತ್ತಿದ್ದುದು ಚಂದ. ಇಂದು ವಿಭಕ್ತ ಕುಟುಂಬಗಳು ಹೆಚ್ಚಾಗಿ ಮಕ್ಕಳು ಅನಾಥರಾಗಿ, ತಂದೆ-ತಾಯಂದಿರು ಜೀವನ ನಡೆಸಲು ಅನುಭವ ಸಾಲದೇ, ವೃದ್ಧರು ವೃದ್ಧಾಶ್ರಮದಲ್ಲಿ ಕಾಲ ಕಳೆಯುವಂತಾಗಿದ್ದು, ಕೂಡಿಬಾಳುವ ಅನಿವಾರ್ಯತೆ ಹೆಚ್ಚಾಗಿದೆ. ದೇವರ ಸೃಷ್ಟಿಯಲ್ಲಿ ಎಲ್ಲರೂ ಸಮಾನರು ಎಂದು ಯೋಚನೆ ಮಾಡಿದಾಗ ಕೂಡಿ ಬಾಳಲು ಮನಸ್ಸು ಮಾಡಿದಾಗ ಪರಸ್ಪರ ಸಹಕಾರ, ಸಹಾಯ ಸಾಧ್ಯವಾಗುತ್ತದೆ. **ಈ ರೀತಿ ಕೂಡಿ ಬಾಳಿದರೆ ಭೂಮಿಯ ಮೇಲೆಯೇ ಸ್ವರ್ಗ-ಸುಖವನ್ನು ಅನುಭವಿಸಬಹುದು ಎಂಬುದೇ ಇದರ ಅರ್ಥವಾಗಿದೆ.**

**ಅಥವಾ**

** ಆಳಾಗಬಲ್ಲವನು; ಅರಸನಾಗಬಲ್ಲನು

**ಗಾದೆಯ ಮಹತ್ವ:** 'ಗಾದೆ' ಎನ್ನುವುದು ಹೇಳಿಕೆಯ ರೂಪದಲ್ಲಿ ಬಳಕೆಯಾಗುವ ಮಾತು. ಅದು ಹಲವರ ಅನುಭವಗಳ ಮಾತು. ಲೋಕೋಕ್ತಿ, ಜಾಣನುಡಿ ಎಂದು ಹೇಳಬಹುದು. ಗಾದೆಯ ಮಾತಿನಲ್ಲಿ ತಿಳುವಳಿಕೆಯಿದೆ. ನೀತಿ ಇದೆ. ನಗೆಚಾಟಿಯಿದೆ. ಒಳಿತು ಕೆಡುಕುಗಳ ಸೂಕ್ಷ್ಮತೆಗಳಿವೆ. ಹೀಗಾಗಿಯೇ ವೇದ ಸುಳ್ಳಾದರೂ ಗಾದೆ ಸುಳ್ಳಾಗದು ಎಂಬ ಮಾತಿದೆ. ನೂರು ಮಾತುಗಳಲ್ಲಿ ಹೇಳುವುದನ್ನು ಒಂದು ವಾಕ್ಯದಲ್ಲಿ ಗಾದೆ ಹೇಳಬಲ್ಲದು. ಗಾದೆ 'ಜಾನಪದ ಸಾಹಿತ್ಯ' ಪ್ರಕಾರಗಳಲ್ಲೊಂದು.

**ಉದಾಹರಣೆಯೊಂದಿಗೆ ಅರ್ಥ ವಿವರಣೆ:** ನಿಷ್ಠೆ, ವಿಧೇಯತೆ, ದುಡಿಮೆ, ಶ್ರಮ, ಪ್ರೀತಿ, ನಿರಹಂಕಾರ ಇದ್ದರೆ ಎಂತಹ ವ್ಯಕ್ತಿಯೂ ಸಫಲತೆಯನ್ನು ಗಳಿಸಬಹುದೆಂಬುದನ್ನು ಈ ಗಾದೆ ತಿಳಿಸುತ್ತದೆ. ಪಲ್ಲಕ್ಕಿಯಲ್ಲಿ ಕುಳಿತು ಸವಾರಿ ಮಾಡುವ ರಾಜನಿಗೆ ಪಲ್ಲಕ್ಕಿ ಹೊತ್ತಿರುವ ಸೇವಕನ ಕಷ್ಟ ತಿಳಿಯುವುದಿಲ್ಲ. ರಾಜನೇ ಆ ಕೆಲಸ ಮಾಡಿದರೆ ಆಳಿನ ಕಷ್ಟ ತಿಳಿಯುತ್ತದೆ. ಆಳು ಒಂದಲ್ಲ ಒಂದು ಕಾಲಕ್ಕೆ ಪ್ರಯತ್ನದ ಸಾಧನೆಯ ಮೂಲಕ ಕಷ್ಟ ಸಹಿಷ್ಣುತೆಯನ್ನು ಸಹಿಸಿಕೊಂಡಾಗ ರಾಜನಾಗಬಲ್ಲ. ಅನುಭವವಿಲ್ಲದೆ ಒಡೆಯನಾಗುವೆನೆಂದು ಹೊರಟರೆ ಅವನು ಯಶಸ್ವಿಯಾಗುವುದಿಲ್ಲ. **ಜನ ಸೇವಕನಾದವನು ಜನನಾಯಕನಾಗಬಹುದು. ಒಂದು ವೇಳೆ ರಾಜನಾಗದಿದ್ದರೂ ರಾಜನ ಮನಸ್ಸನ್ನಾದರೂ ಗೆಲ್ಲಬಹುದು. ಎಳೆಯ ಕರು ಎತ್ತಾಗುವುದಿಲ್ಲವೇ?**
**ಉದಾ:** ಸಂಗೊಳ್ಳಿ ರಾಯಣ್ಣ, ಹೈದರಾಲಿ.

**IX ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** **6x3=18**

33. "ರೂಪಿನಂತೆ ಮಾತು ಕೂಡ ಎನಿತುದಾರವಾಗಿದೆ"

**ಆಯ್ಕೆ:-** ಈ ವಾಕ್ಯವನ್ನು **'ಪು. ತಿ. ನರಸಿಂಹಾಚಾರ್'** ಅವರು ರಚಿಸಿರುವ **'ಶಬರಿ'** ಗೀತನಾಟಕದಿಂದ ಆಯ್ದ **'ಶಬರಿ'** ಎಂಬ ಪಾಠದಿಂದ ಆರಿಸಲಾಗಿದೆ.

**ಸಂದರ್ಭ:-** ಶ್ರೀರಾಮನನ್ನು ಕಾಣುವುದೇ ಏಕೈಕ ಗುರಿ ಎಂದು ಭಾವಿಸಿದ್ದ ಶಬರಿ ರಾಮಧ್ಯಾನದಲ್ಲಿ ತೊಡಗಿ ರಾಮನ ದರ್ಶನಕ್ಕಾಗಿ ಮತಂಗ ಋಷಿಯ ಆಶ್ರಮದಲ್ಲಿರುತ್ತಾಳೆ. ತಪಸ್ವಿಯಾದ ದನುವಿನ ಸಲಹೆಯಂತೆ ಮತಂಗಾಶ್ರಮವನ್ನು ಪ್ರವೇಶಿಸಿದ ರಾಮ-ಲಕ್ಷ್ಮಣರು ಶಬರಿಯನ್ನು ಕಾಣುತ್ತಾರೆ. ರಾಮನು ಶಬರಿಯ ಅತಿಥಿ ಸತ್ಕಾರದ ಪರಿಯನ್ನು ಕುರಿತು 'ನಿನ್ನ ಆತಿಥ್ಯದ ಸವಿಯು ಅಯೋಧ್ಯೆಯ ಅರಮನೆಯ ಆತಿಥ್ಯಕ್ಕಿಂತ ಮಿಗಿಲಾದುದು. ಇಷ್ಟು ಪ್ರೀತಿಯನ್ನು ತೋರುವ ನಿನ್ನನ್ನು ತಾಯಿ ಎಂದು ತಿಳಿಯುವೆವು' ಎಂದ ಸಂದರ್ಭದಲ್ಲಿ ಶಬರಿಯು ಈ ಮಾತನ್ನು ರಾಮನಿಗೆ ಹೇಳುತ್ತಾಳೆ.

**ಸ್ವಾರಸ್ಯ:- ಮಾತಿನ ಹಿಂದೆ ಮತಿ ಇರಬೇಕು; ಮಾತಿನ ಮುಂದೆ ಕೃತಿ ಬರಬೇಕು** ಎಂಬ ಗಾದೆಮಾತಿನಂತೆ **'ರಾಮನ ಪ್ರೀತಿಯ ಮಾತುಗಳು ಅವನ ರೂಪಿನಂತೆ ಮಧುರವಾದುವು'** ಎಂದು ಶಬರಿಯ ಮಾತಿನ ಮೂಲಕ ಸೌಂದರ್ಯವನ್ನು ಗುರುತಿಸುವ ಕವಿಯ ಮನೋಭಾವ ಸ್ವಾರಸ್ಯಪೂರ್ಣವಾಗಿದೆ.

34. "ಅವರ ಸಾಧನೆಯ ಕಿರೀಟಕ್ಕೆ ಮತ್ತೊಂದು ಗರಿಯನ್ನು ಸೇರಿಸಿತು."

**ಆಯ್ಕೆ:-** ಈ ವಾಕ್ಯವನ್ನು **ಡಿ.ಎಸ್. ಜಯಪ್ಪಗೌಡರು** ಬರೆದ **'ದಿವಾನ್ ಸರ್.ಎಂ. ವಿಶ್ವೇಶ್ವರಯ್ಯನವರ ಕಾರ್ಯಸಾಧನೆಗಳು'** ಎಂಬ ಸಂಶೋಧನಾ ಗ್ರಂಥದಿಂದ ಆಯ್ದ **"ಭಾಗ್ಯಶಿಲ್ಪಿಗಳು"** ಎಂಬ ಪಾಠಭಾಗದಿಂದ ಆರಿಸಲಾಗಿದೆ.

**ಸಂದರ್ಭ:-** ವಿಶ್ವೇಶ್ವರಯ್ಯನವರು ಪೂನಾದ ಮುಥಾ ಕಾಲುವೆಗೆ ನೀರಿನ ನೆಲೆಯಾಗಿದ್ದ ಫೀಪ್ ಜಲಾಶಯಕ್ಕೆ ಸ್ವಯಂಚಾಲಿತ ಬಾಗಿಲುಗಳನ್ನು ಅಳವಡಿಸಿದ ಸಂದರ್ಭದಲ್ಲಿ **ಲೇಖಕರು ಈ ಮಾತನ್ನು ಹೇಳುತ್ತಾರೆ.**

**ಸ್ವಾರಸ್ಯ:-** ವಿಶ್ವೇಶ್ವರಯ್ಯನವರ ಕಾರ್ಯದಕ್ಷತೆ, ಸಂಶೋಧನಾಮತಿ, ಪ್ರಗತಿಪರ ಕಾಳಜಿಯನ್ನು ಮೇಲಿನ ವಾಕ್ಯವು ಸ್ವಾರಸ್ಯಪೂರ್ಣವಾಗಿ ಪ್ರತಿಬಿಂಬಿಸುತ್ತದೆ.

35. "ಹುಸಿಯಿದ ಬೇಹಾರಿಯೇ ಇಲ್ಲ"

**ಆಯ್ಕೆ:** ಪ್ರಸ್ತುತ ವಾಕ್ಯವನ್ನು **'ಕನ್ನಡ ಸಾಹಿತ್ಯ ಪರಿಷತ್ತು'** ಪ್ರಕಟಿಸಿರುವ, **ಗುಂಡ್ಮಿ ಚಂದ್ರಶೇಖರ ಐತಾಳರು** ಗದ್ಯಾನುವಾದ ಮಾಡಿರುವ **ದುರ್ಗಸಿಂಹ ಕವಿಯ ಕರ್ಣಾಟಕ ಪಂಚತಂತ್ರಂ** ಎಂಬ ಕೃತಿಯಿಂದ ಆರಿಸಿದ **'ವೃಕ್ಷಸಾಕ್ಷಿ'** ಗದ್ಯದಿಂದ ಆರಿಸಲಾಗಿದೆ.

**ಸಂದರ್ಭ:-**ಧರ್ಮಾಧಿಕರಣರು ಮರವನ್ನು ಸಾಕ್ಷಿಮಾಡಿ ಸತ್ಯವನ್ನೇ ನುಡಿ ಎಂದಾಗ **"**ಆ ಮರದ ಪೊಟರೆಯೊಳಗೆ ಅಡಗಿದ್ದ ದುಷ್ಟಬುದ್ಧಿಯ ತಂದೆ ಪ್ರೇಮಮತಿಯು ಮತಿಗೆಟ್ಟು, ಧರ್ಮವನ್ನು ಬಿಟ್ಟು, ಹೊನ್ನೆಲ್ಲವನ್ನು ಧರ್ಮಬುದ್ಧಿಯೇ ತೆಗೆದುಕೊಂಡನು**"** ಎಂದು ನುಡಿದ ಸಂದರ್ಭದಲ್ಲಿ ಕವಿಯು ಮೇಲ್ಕಂಡ ಮಾತನ್ನು ಅಲಂಕಾರಿಕವಾಗಿ ಹೇಳಿದ್ದಾರೆ.

**ಸ್ವಾರಸ್ಯ:-** ದುಷ್ಟಬುದ್ಧಿಯು ತನ್ನ ವಂಚನೆ, ಕಪಟತನ, ಮೋಸದಿಂದ ತಾನು ಹಾಳಾಗುವುದಲ್ಲದೆ, ಸಂಪತ್ತಿಗಾಗಿ ತನ್ನ ತಂದೆಯನ್ನು ಬಲಿಕೊಡುವ **ಹೃದಯಹೀನ ಕೃತ್ಯದಿಂದ 'ಮಾಡಿದ್ದುಣ್ಣೋ ಮಾರಾಯ' ಎಂಬ ನೀತಿಯಂತೆ ಕೆಟ್ಟ ಫಲವನ್ನು ಅನುಭವಿಸುವಂತಾಯಿತು** ಎಂದು ಅತ್ಯಂತ ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.

36. "ಹೊಡೆದರೊ ಗುಂಡ ಕರುಣ ಇಲ್ಲದ್ಹಂಗ"

**ಆಯ್ಕೆ:** ಈ ವಾಕ್ಯವನ್ನು **ಡಾ. ಬಿ. ಎಸ್. ಗದ್ದಗಿಮಠ** ಅವರು ಸಂಪಾದಿಸಿರುವ **'ಕನ್ನಡ ಜನಪದ ಗೀತೆಗಳು'** ಕೃತಿಯಿಂದ ಆಯ್ದು ನೀಡಿರುವ **'ಹಲಗಲಿ ಬೇಡರು'** ಎಂಬ ಪದ್ಯದಿಂದ ಆರಿಸಲಾಗಿದೆ.

**ಸಂದರ್ಭ:–** ನಿಶ್ಶಸ್ತ್ರೀಕರಣದ ಆದೇಶವನ್ನು ವಿರೋಧಿಸಿ ಬ್ರಿಟಿಷ್ ಸರ್ಕಾರದ ವಿರುದ್ಧ ದಂಗೆ ಎದ್ದ ಸ್ವಾತಂತ್ರ್ಯಪ್ರಿಯ ಹಲಗಲಿಯ ವೀರರನ್ನು ಬಗ್ಗುಬಡಿಯಲು ಬ್ರಿಟಿಷರ ದಂಡು ಬಂದಿತು. ಬ್ರಿಟಿಷರ ದಂಡಿನ ಸಿಪಾಯಿಗಳು ಹಲಗಲಿಯ ಬೇಡರ ಬೆನ್ನು ಹತ್ತಿ ಕೊಂದರು. ಎದುರಿಗೆ ಸಿಕ್ಕಸಿಕ್ಕವರಿಗೆಲ್ಲ ಕರುಣೆ ಇಲ್ಲದೆ ಗುಂಡು ಹೊಡೆದು ಸಾಯಿಸಿದರು. ಸ್ವಾತಂತ್ರ್ಯಪ್ರಿಯರಾಗಿದ್ದ ಹಲಗಲಿಯ ವೀರರೆಲ್ಲರೂ ಬ್ರಿಟಿಷ್ ಸಿಪಾಯಿಗಳ ವಿರುದ್ಧ ಹೋರಾಡಿ ಹುತಾತ್ಮರಾದರು ಎಂಬ ಸಂದರ್ಭವನ್ನು ಕಥಾನಕವಾಗಿ ವರ್ಣಿಸುವ ಸಂದರ್ಭದಲ್ಲಿ ಲಾವಣಿಕಾರನು ಈ ಮಾತನ್ನು ಹೇಳುತ್ತಾನೆ.
**ಸ್ವಾರಸ್ಯ:–** ಬ್ರಿಟೀಷ್ ಅಧಿಕಾರಿಗಳ ದರ್ಪ, ದೌರ್ಜನ್ಯ, ತಿರುಗಿ ಬಿದ್ದವರ ಮೇಲೆ ಕೈಗೊಂಡ ಕ್ರಮ, ಅದನ್ನು ವಿರೋಧಿಸಿದ ಹಲಗಲಿ ವೀರರ ಕೆಚ್ಚೆದೆಯ ಪ್ರತಿಭಟನೆ ಸ್ವಾರಸ್ಯಕರವಾಗಿ ಮೂಡಿಬಂದಿದೆ.

37. "ಜೀಯ ಹುಸಿಯಾದವೆಂಬುದು ಕಷ್ಟ"
**ಆಯ್ಕೆ:–** ಈ ವಾಕ್ಯವನ್ನು **'ಕುಮಾರವ್ಯಾಸ'** ವಿರಚಿತ **'ಕರ್ಣಾಟ ಭಾರತ ಕಥಾಮಂಜರಿ'** ಎಂಬ ಕೃತಿಯಿಂದ ಆಯ್ದ **'ಕೌರವೇಂದ್ರನ ಕೊಂದೆ ನೀನು'** ಎಂಬ ಪದ್ಯದಿಂದ ಆರಿಸಿಕೊಳ್ಳಲಾಗಿದೆ.
**ಸಂದರ್ಭ:–** ಶ್ರೀಕೃಷ್ಣನು ಕರ್ಣನೊಂದಿಗೆ ರಥದಲ್ಲಿ ಕುಳ್ಳಿರಿಸಿಕೊಂಡು ಕೌರವರು ಯಾದವರು ಒಂದೇ ವಂಶದವರು, ಪಾಂಡವರಲ್ಲಿ ನೀನೇ ಹಿರಿಯ ಎಂದೂ, ರಾಜತ್ವ & ರಾಜಪದವಿಯನ್ನು ಬಿಟ್ಟು ದುರ್ಯೋಧನ ಹೇಳಿದಂತೆ ಕೇಳಿಕೊಂಡಿ ರುವುದು ನಿನಗೆ ಸರಿಯಲ್ಲ ಎಂದು ಕರ್ಣನ ಮನದಲ್ಲಿ ಬದಲಾವಣೆ ತರಲು ಪ್ರಯತ್ನಿಸುವ ಸಂದರ್ಭದಲ್ಲಿ ಈ ಮಾತು ಬಂದಿದೆ.
**ಸ್ವಾರಸ್ಯ:–** :– **ಕೃಷ್ಣನ ಭೇದ ತಂತ್ರ,** ಶತ್ರುವಿನೊಂದಿಗೆ ಸಮರಕ್ಕಿಳಿದು ಕಾದಾಡುವ ಮುನ್ನ ಶತ್ರುಬಲವನ್ನು ಶಮನಗೊಳಿಸುವ ರಾಜತಂತ್ರ, ಪಾಂಡವರಿಗೆ ಅಪಾಯವಾಗದಂತೆ ಕರ್ಣನಿಂದ ಪಾಂಡವರನ್ನು ರಕ್ಷಿಸಬೇಕೆಂಬ ನಿರ್ಧಾರ, ಜನ್ಮರಹಸ್ಯ ತಿಳಿಸಿ ಕರ್ಣನನ್ನು ಭಾವನಾತ್ಮಕವಾಗಿ ಕುಗ್ಗಿಸುವ ಪ್ರಯತ್ನ **ಕವಿ ಸ್ವಾರಸ್ಯಪೂರ್ಣವಾಗಿ ಅಭಿವ್ಯಕ್ತಗೊಂಡಿದೆ.**

38. "ಹಸುರು ಹಸುರಿಳೆಯುಸಿರೂ"
**ಆಯ್ಕೆ:–** ಪ್ರಸ್ತುತ ವಾಕ್ಯವನ್ನು **ಕುವೆಂಪು** ಅವರ **'ಪಕ್ಷಿಕಾಶಿ'** ಕವನ ಸಂಕಲನದಿಂದ ಆಯ್ದ **'ಹಸುರು'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.
**ಸಂದರ್ಭ:–** :– ಅಶ್ವಯುಜ ಮಾಸದ ನವರಾತ್ರಿಯಲ್ಲಿ ಪ್ರಕೃತಿಯಲ್ಲಿ ಹೆಪ್ಪುಗಟ್ಟಿದ ಹಚ್ಚ ಹಸುರಿನ ಸೌಂದರ್ಯಾನುಭವವನ್ನು ಅನುಭವಿಸುತ್ತಾ, ಅತ್ತ–ಇತ್ತ–ಎತ್ತ ನೋಡಿದರೂ ಹಸುರು..ಹಸುರು... ಸರ್ವವೂ ಹಸುರಾಗಿತ್ತು ಭೂಮಿಯ ಸರ್ವ ಕಣಕಣವೂ ಹಸುರಾಗಿತ್ತು, ಈ ಹಸಿರೇ ಭೂಮಿಯ ಉಸಿರಾಗಿತ್ತು ಎಂಬುದನ್ನು ಕವಿ ಕುವೆಂಪು ಅವರು ಮೇಲಿನಂತೆ ಹೇಳಿದ್ದಾರೆ.
**ಸ್ವಾರಸ್ಯ:–** ಮಲೆನಾಡಿನ ಪ್ರಕೃತಿ ಸೌಂದರ್ಯ ಹಾಗೂ ಪ್ರಕೃತಿಯ ಹಸುರಿನಲ್ಲಿ ಕವಿ ಮನ ತಲ್ಲೀನರಾಗಿರುವುದು ಸ್ವಾರಸ್ಯಕರವಾಗಿ ಮೂಡಿ ಬಂದಿದೆ. ಕವಿ ಮತ್ತು ಪ್ರಕೃತಿ ಒಂದಾಗುವ ಅವರ ಕಾವ್ಯದ ಅದ್ವೈತ ಸ್ಥಿತಿ ಅಭಿವ್ಯಕ್ತಗೊಂಡಿದೆ.

**X ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** **1x4=4**

**39.** ನೆಲಕಿಚ್ಚಿವೆನೆಂದು ಬಗೆದಿರೆ।
ಚಲಕಿಚ್ಚೆವೆಂ ಪಾಂಡುಸುತರೊಳೀನೆಲನಿದು ಪಾ॥ **ಅಥವಾ**
ಬ್ಬೆಲನೆನಗೆ ದಿನಪಸುತನಂ।
ಕೊಲಿಸಿದ ನೆಲನೊಡನೆ ಮತ್ತೆ ಪುದುವಾಳ್ವವೆನೇ॥

ಪುಟ್ಟಿದ ನೂರ್ವರುಮೆನ್ನೊಡ।
ವುಟ್ಟಿದ ನೂರ್ವರುಮಿದಿರ್ಚೆ ಸತ್ತೊಡೆ ಕೋಪಂ।
ಮುಟ್ಟಿ ಪೊದಱ್ದುದು ಸತ್ತರ್
ಪುಟ್ಟಿರೆ ಪಾಂಡವರೊಳಿಱಿದು ಛಲಮನೆ ಮೆಱೆವೆಂ ॥

**XI ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ** ಮೌಲ್ಯವನ್ನಾಧರಿಸಿ ಸಾರಾಂಶ **ಬರೆಯಿರಿ.** **1x4=4**

40. ಎತ್ತಣ ತುರಂಗಮಿದು ಪೊಕ್ಕು ಪೂದೋಟಮಂ
ಕಿತ್ತಳಿದುದು ವಾಲ್ಮೀಕಿ ಮುನಿನಾಥನೇ
ಪೊತ್ತುಮಾರ್ಕೊವುದೆಂದೆನಗೆ ನೇಮಿಸಿ ಪೋದನಪ್ಪಂ ಕರೆಸಲಾಗಿ
ಮತ್ತೆ ವರುಣನ ಲೋಕದಿಂ ಬಂದು ಮುಳಿದಪನೆ
ನುತ ಹಯದೆಡೆಗೆ ನಡೆತಂದು ನೋಡಲ್ಕದರ
ನೆತ್ತಿಯೊಳ್ ಮೆರೆವ ಪಟ್ಟದ ಲಿಖಿತಮಂ ಕಂಡು ಲವನೋದಿಕೊಳುತಿರ್ದನು.

ಈ ವಾಕ್ಯವನ್ನು ಕವಿ ಲಕ್ಷ್ಮೀಶ ವಿರಚಿತ **'ಜೈಮಿನಿ ಭಾರತ'** ಎಂಬ ಕೃತಿಯಿಂದ ಆಯ್ದ **'ವೀರಲವ'** ಎಂಬ ಪದ್ಯದಿಂದ ಆರಿಸಲಾಗಿದೆ. **ಕಷ್ಟ–ಸವಾಲುಗಳು ಬಂದಾಗ ಚಿಕ್ಕವರು, ಅಸಮರ್ಥರು ಎಂದು ಕೊರಗದೆ ದಿಟ್ಟತನದಿಂದ ಎದುರಿಸಬೇಕೆಂಬ ಬಾಲ್ಯಸಹಜ ಸಾಹಸ ಪ್ರವೃತ್ತಿಯನ್ನು ಲವನಲ್ಲಿ ಕಾಣಬಹುದು.**

ಸಾರಾಂಶ:- ಉಪವನದೊಳಕ್ಕೆ ನುಗ್ಗಿದ ಕುದುರೆಯನ್ನು ನೋಡಿದ ಲವನು ಎಲ್ಲಿಯ ಕುದುರೆಯಿದು? ಉಪವನಕ್ಕೆ ನುಗ್ಗಿ ಹೂದೋಟವನ್ನು ಹಾಳು ಮಾಡಿದೆಯಲ್ಲ! **ವಾಲ್ಮೀಕಿ ಮುನಿಶ್ರೇಷ್ಠರು** ವರುಣನು ಕರೆದಿದ್ದರಿಂದ ಅಲ್ಲಿಗೆ ಹೋಗುವಾಗ ನನಗೆ ಈ ಉಪವನವನ್ನು ಕಾಯಲು ಹೇಳಿ ಹೋಗಿದ್ದರು.ಮತ್ತೆ ಅವರು ವರುಣನ ಲೋಕದಿಂದ ಹಿಂದಿರುಗಿ ಬಂದಾಗ ಈ ಹೂದೋಟವು ಹಾಳಾದುದನ್ನು ನೋಡಿ **ಮುನಿಸಿ(ಕೋಪಿಸಿ)ಕೊಳ್ಳುವರೆಂದು** ಯೋಚಿಸುತ್ತಾ ಕುದುರೆಯೆಡೆಗೆ ಬಂದನು. ಆಗ ಲವನು ಅದರ **ಹಣೆಯ ಮೇಲೆ ಬರೆಹದ ಪಟ್ಟಿಯು ಇದ್ದುದನ್ನು ನೋಡಿ ಅದನ್ನು ಓದತೊಡಗಿದನು.**
ಮೌಲ್ಯ:- **ಬಾಲ್ಯ ಸಹಜ ಮೈಮರೆಯುವ ಗುಣವನ್ನು ಮತ್ತು ಹಿರಿಯರು ಹೇಳಿದ ಮಾತನ್ನು, ಜವಾಬ್ದಾರಿಯನ್ನು ಗೌರವದಿಂದ ಕಿರಿಯರು ಅತ್ಯುತ್ತಮವಾಗಿ ನಡೆಸಿಕೊಡಬೇಕೆಂಬ ಮೌಲ್ಯವನ್ನು ಇಲ್ಲಿ ಕಾಣಬಹುದು.**

**XII** ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. **2x4=8**

**41. ಮೂರ್ತಿರಾಯರ ದೃಷ್ಟಿಯಲ್ಲಿ ಹುಲಿಯು ಬೇಟೆಯಾಡುವ ಬಗೆಯನ್ನು ವಿವರಿಸಿ.**

**ಉತ್ತರ:** ಶಾಕಾಹಾರವನ್ನು ತಿಂದು ಬದುಕಬಹುದಾದ ಮಾನವನೇ ಮಾಂಸವನ್ನು ತಿನ್ನಬಹುದಾದರೆ ಆಹಾರಕ್ಕಾಗಿ ಹುಲಿಯು ಪ್ರಾಣಿಗಳನ್ನು ಕೊಂದು ತಿನ್ನುವುದರಲ್ಲಿ ತಪ್ಪಿಲ್ಲ. ಆದರೆ ಹಾಗೆ ಕೊಲ್ಲುವಾಗ ಯಾವುದಾದದರೂ ಒಂದು ಧರ್ಮವನ್ನು ಅನುಸರಿಸಿ ಕೊಲ್ಲುವುದೇ ಅಥವಾ ಧರ್ಮಾಧರ್ಮಗಳ ಲೆಕ್ಕವಿಡದೆ ಸ್ವಚ್ಛಂದದಿಂದ ವರ್ತಿಸುವುದೇ ಎಂಬುದೇ ಮುಖ್ಯ ಪ್ರಶ್ನೆ. ಇತರ ದೇಶಗಳಲ್ಲಿ ಇರುವ ಹುಲಿಗಳ ವಿಷಯ ಹೇಗೋ ಗೊತ್ತಿಲ್ಲ ಆದರೆ ಯಾವ ನಾಡಿನಲ್ಲಿ ಶ್ರೀರಾಮನಂತ ದೊರೆಗಳು ಆಳಿದರೋ, ಭಗವದ್ಗೀತೆಯಂತ ಗ್ರಂಥ ಉದ್ಭವಿಸಿತೋ ಆ ಭರತ ಭೂಮಿಯಲ್ಲಿ ಜನಿಸಿದ ಹುಲಿಗಳು ಅಧರ್ಮಕ್ಕೆ ಅವಕಾಶ ಮಾಡಿಕೊಡುವುದಿಲ್ಲ. ಭರತ ಖಂಡದ ಹುಲಿಗಳು ಹಿಂದಿನಿಂದ ಹಾರಿ ಕೊಲ್ಲುವುದಿಲ್ಲ.  ಏಕೆಂದರೆ ಶತೃಗಳಾದರೂ ಸರಿಯೇ ಬೆನ್ನು ತಿರುಗಿರುವಾಗ ಕೊಲ್ಲುವುದು ಧರ್ಮವಲ್ಲ. ಭಗವದ್ಗೀತೆಯ 'ಸ್ವಧರ್ಮೇ ನಿಧನಂ ಶ್ರೇಯಃ' ಎಂಬ ಮಾತಿನಂತೆ ಹುಲಿಗಳು ಧರ್ಮಪರತೆಯಿಂದ ಬೇಟೆಯಾಡುತ್ತವೆ.

ಅಥವಾ

**** ಶಾನುಭೋಗರು ಬದುಕುಳಿದದ್ದು ಹುಲಿಯ ಧರ್ಮಶ್ರದ್ಧೆಯಿಂದ ಎಂಬುದನ್ನು ಲೇಖಕರು ಹೇಗೆ ವಿವರಿಸಿದ್ದಾರೆ?**

**ಉತ್ತರ:** ಶಾನುಭೋಗರು ಖಿರ್ದಿ ಪುಸ್ತಕ ಹುಲಿಗೆ ಎಸೆದು ಓಡುವಾಗ ಎಡವಿ ಬಿದ್ದು ಮೂರ್ಛೆ ಹೋದರು. ಮೂರ್ಛೆಯಿಂದ ಎದ್ದಾಗ ಅವರ ಸುತ್ತ ನಾಲ್ಕೈದು ಜನ ರೈತರು ಇದ್ದರು. ಅವರು ನೀರು ಚಿಮುಕಿಸಿ ಶಾನುಭೋಗರನ್ನು ಎಚ್ಚರಿಸಿದರು. ಮನೆಗೆ ಬಂದ ಶಾನುಭೋಗರು ಖಿರ್ದಿ ಪುಸ್ತಕವನ್ನು ಜೋಪಾನವಾಗಿ ತೊಲೆಯ ಮೇಲೆ ಇಟ್ಟರು. ಶಾನುಭೋಗರು ಆ ಪುಸ್ತಕವನ್ನು ವಾತ್ಸಲ್ಯದಿಂದ ಕೃತಜ್ಞತೆಯಿಂದ ನೋಡಿದರು. ತನ್ನ ಪ್ರಾಣವನ್ನು ಖಿರ್ದಿ ಪುಸ್ತಕವೇ ಉಳಿಸಿತು ಎಂಬ ಕೃತಜ್ಞತೆ ಶಾನುಭೋಗರಲ್ಲಿ ಇದೆ. ಹುಲಿಯಿಂದ ತಪ್ಪಿಸಿಕೊಳ್ಳಲು ಖಿರ್ದಿ ಪುಸ್ತಕ ಆ ಕ್ಷಣಕ್ಕೆ ಒಂದು ಸಾಧನವಾದರೂ ಅವರು ಎಡವಿ ಬಿದ್ದಾಗ ಬೆನ್ನು ಮೇಲಾಗಿ ಬಿದ್ದು ಮೂರ್ಛೆ ಹೋಗಿರುತ್ತಾರೆ. ಹುಲಿಯ ಧರ್ಮಶ್ರದ್ಧೆ, ಬೆನ್ನಿನ ಕಡೆಯಿಂದ (ಹಿಂದಿನಿಂದ) ಬೇಟೆಯಾಡುವುದಿಲ್ಲ. ಆದ್ದರಿಂದ ಶಾನುಭೋಗರನ್ನು ಕೊಲ್ಲದೆ ಬಿಟ್ಟಿದೆ. **ಖಿರ್ದಿ ಪುಸ್ತಕಕ್ಕಿಂತ ಹುಲಿಯ ಧರ್ಮಶ್ರದ್ಧೆಯೇ ಶಾನುಭೋಗರ ಪ್ರಾಣ ಉಳಿಯಲು ಕಾರಣವೆನ್ನುವುದು ಲೇಖಕರ ಅಭಿಪ್ರಾಯವಾಗಿದೆ.**

42. ನಾವು ಯಾವ ಸಂಕಲ್ಪ ಕೈಗೊಳ್ಳಬೇಕೆಂಬುದು ಕವಿ ಶಿವರುದ್ರಪ್ಪನವರ ಆಶಯವಾಗಿದೆ?

**ಉತ್ತರ:** ನಮ್ಮ ಸುತ್ತಲೂ ಹಬ್ಬಿರುವ **ದ್ವೇಷದ ಕತ್ತಲೆಯನ್ನು ಕಳೆಯಲು, ಪ್ರೀತಿಯ ದೀಪವನ್ನು,** ಸಂಸಾರ ಸಾಗರದಲ್ಲಿ ಬಿರುಗಾಳಿಗೆ ಸಿಲುಕಿ **ಹೊಯ್ದಾಡುತ್ತಿರುವ, ಬದುಕೆಂಬ ಹಡಗನ್ನು ಎಚ್ಚರದಲ್ಲಿ ಮುನ್ನಡೆಸುವ.** ಪರಿಸರ ಮಾಲಿನ್ಯದಿಂದ ಕಲುಷಿತವಾಗಿರುವ ನದೀಜಲಗಳನ್ನು ಶುದ್ಧೀಕರಿಸುವ. **ಮುಂಗಾರಿನ ಮಳೆಯಂತಹ ಪರಿಸರ ಪ್ರೇಮಿಯಾಗುವ.** ಬರಡಾಗಿರುವ **ಕಾಡುಮೇಡುಗಳು ಹಚ್ಚಹಸಿರಿನಿಂದ** ಕಂಗೊಳಿಸಿಸಮೃದ್ಧವಾಗುವಂತಹ ವಸಂತ ಕಾಲವಾಗುವ. **ಅಸಮಾನತೆಯಿಂದ ಅಧಃಪತನಗೊಂಡಿರುವ ಸಮಾಜವನ್ನು ಹೊಸ ಭರವಸೆಗಳ ಮೂಲಕ ಮೇಲೆತ್ತುವ.** ಭಾಷೆ, ಜಾತಿ, ಮತ, ಧರ್ಮಗಳ ಬೇಧ-ಭಾವದಿಂದ ಮನುಜ-ಮನುಜರ ನಡುವೆ **ಅಸಮಾನತೆಯ ಅಡ್ಡಗೋಡೆಗಳನ್ನು ಕೆಡಹಿ ಸಮಾನತೆಯ ಮನೋಭಾವವನ್ನು ಮೂಡಿಸುವ ಸೇತುವೆಯಾಗುವ.** ಎಲ್ಲ **ಮತಗಳು ಸಾಧನೆಯ ಹಾದಿಗಳು ಎಂಬ ಎಚ್ಚರದಲ್ಲಿ ಬದುಕುವ.** ಭಯ-ಸಂಶಯಗಳಿಂದ ಮಸುಕಾದ **ಕಣ್ಣುಗಳಲ್ಲಿ ಭವಿಷ್ಯದ ಹೊಂಗನಸು ಕಾಣುವಂತೆ ಮಾಡುವ ದೃಢಸಂಕಲ್ಪವನ್ನು ಕೈಗೊಳ್ಳಬೇಕು.** ಸ್ವಾತಂತ್ರ್ಯ ಗಳಿಸುವುದೇ ಜೀವನದ ಏಕೈಕ ಸಂಕಲ್ಪ ಎಂದುಕೊಂಡ ರಾಷ್ಟ್ರಪಿತ  ಮಹಾತ್ಮಾ ಗಾಂಧೀಜಿಯವರು ಸಾಧಕರೆನಿಸಿಕೊಂಡರು. ಅಂತೆಯೇ ಯಾವುದೇ ರೀತಿಯ ಸವಾಲುಗಳು ಎದುರಾದರೂ ಆತ್ಮವಿಶ್ವಾಸದ ಸಂಕಲ್ಪನಿಷ್ಠೆಯಿಂದ ಕ್ರಿಯಾಶೀಲರಾದಾಗ ಯಶಸ್ಸು ಲಭಿಸುತ್ತದೆ ಎಂಬುದು ಜಿ.ಎಸ್. ಶಿವರುದ್ರಪ್ಪನವರ ಅಭಿಪ್ರಾಯವಾಗಿದೆ.

ಅಥವಾ

** ಸಂಕಲ್ಪ ಮತ್ತು ಅನುಷ್ಠಾನದ ಕುರಿತು ಕವಿ ಶಿವರುದ್ರಪ್ಪನವರ ಅಭಿಪ್ರಾಯವನ್ನು ವಿವರಿಸಿ.
**ಉತ್ತರ:** ನಮ್ಮ ಸುತ್ತಲೂ ಕವಿದಿರುವ ಅಜ್ಞಾನವೆಂಬ ಕತ್ತಲೆಯನ್ನು ಹೋಗಲಾಡಿಸಲು **ಪ್ರೀತಿಯ ಹಣತೆಯನ್ನು ಹಚ್ಚೋಣ.** ಬಿರುಗಾಳಿಗೆ ಹೊಯ್ದಾಡುತ್ತಿರುವ **ಸಂಸಾರವೆಂಬ ಹಡಗನ್ನು ಎಚ್ಚರಿಕೆಯಿಂದ ಮುಂದೆ ನಡೆಸೋಣ.** ನಮ್ಮ ಸುತ್ತಮುತ್ತಲಿನ ಪರಿಸರವು ನಿರಂತರವಾಗಿ ಕಲುಷಿತಗೊಳ್ಳುತ್ತಿದೆ. ಹೀಗೆ **ಕಲುಷಿತಗೊಂಡಿರುವ ನದೀಜಲಗಳಿಗೆ ಮುಂಗಾರಿನ ಮಳೆಯಾಗೋಣ.** ಬರಡಾಗಿರುವ **ಕಾಡುಮೇಡುಗಳಿಗೆ ವಸಂತವಾಗೋಣ.** ಸಮಾಜದಲ್ಲಿ ಅನೇಕ ಜನರು ನಾನಾ ಕಾರಣಗಳಿಂದ ಭಯಭೀತರಾಗಿದ್ದಾರೆ, ದುಃಖಿತರಾಗಿದ್ದಾರೆ, **ಆತ್ಮವಿಶ್ವಾಸವನ್ನು ಕಳೆದುಕೊಂಡಿದ್ದಾರೆ. ಅವರಲ್ಲಿ ಹೊಸ ಭರವಸೆಗಳನ್ನು ತುಂಬೋಣ.** ಧರ್ಮ, ಜಾತಿ, ಭಾಷೆ ಮುಂತಾದ ಕಾರಣಗಳಿಂದ ಮನುಜ–ಮನುಜರ ನಡುವೆ ಭೇದ–ಭಾವಗಳು ನಿರ್ಮಾಣಗೊಂಡು ದ್ವೇಷ, ಅಸೂಯೆ ಮುಂತಾದವು ಮನೆಮಾಡಿವೆ. ಇವುಗಳನ್ನು ಪ್ರೀತಿ, ವಿಶ್ವಾಸ ಮುಂತಾದವುಗಳ ಮೂಲಕ ಹೋಗಲಾಡಿಸಿ **ಮನುಷ್ಯರ ನಡುವೆ ಸಮಾನತೆಯ ಸೇತುವೆಯಾಗೋಣ.** ಪ್ರತಿಯೊಂದು **ಮತಗಳು ದಾರಿಯನ್ನು ತೋರಿಸುವ ದೀವಿಗೆಗಳು** ಎಂಬುದನ್ನು ಅರಿತು ಎಚ್ಚರದಿಂದ ಬದುಕನ್ನು ಮುನ್ನಡೆಸೋಣ. ಭಯ–ಸಂಶಯಗಳಿಂದ **ಕಂದಿದ ಕಣ್ಣುಗಳಿಗೆ ನಾಳಿನ ಕನಸುಗಳನ್ನು ಬಿತ್ತುವುದರ ಮೂಲಕ ಅವರಲ್ಲಿ ನವಚೈತನ್ಯವನ್ನು ತುಂಬೋಣ** ಎಂಬುದು ಕವಿ ಶಿವರುದ್ರಪ್ಪನವರ ಆಶಯವಾಗಿದೆ.

**XIII ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 1x4=4(2+2)**
43. ದೈನ್ಯದ ಬುಡದಲ್ಲಿ ಭಯವಿದೆ. ಭಯವೇ ನರನನ್ನು ದೀನನನ್ನಾಗಿ ಮಾಡುತ್ತದೆ. ಭಯದ ಸನ್ನಿವೇಶಗಳೆಂದರೆ, ದಟ್ಟಡವಿಯಲ್ಲಿ ದಾರಿತಪ್ಪಿದ ಗೋವು, ಮುಚ್ಚಿದ ಕಣ್ಣುಗಳು, ಹಾರುತ್ತಿರುವ ಎದೆ, ಕತ್ತಲೆಯಲ್ಲಿ ಕಂಗೆಟ್ಟ ಶಿಶು, ಚಕ್ರವರ್ತಿಯ ಎದುರಿಗೆ ನ್ಯಾಯ ಸ್ಥಾನದಲ್ಲಿ ನಡುಗುತ್ತ ನಿಂತ ಅಪರಾಧಿ, ಬೇಟೆನಾಯಿ ಬೆನ್ನಟ್ಟಿದ ಮೊಲವೇ ಭಯ. ಭಯ ಹುಟ್ಟುವುದು ಅಜ್ಞಾನದಿಂದ, ಪಾಪ ಶಂಕೆಯಿಂದ, ದೂಷಿತ ಹೃದಯದಿಂದ. ಜ್ಞಾನ ಹೆಚ್ಚಿದಂತೆ ಭಯ ಕಡಿಮೆಯಾಗುವುದು. ಹಳ್ಳಿಗ ವಿಮಾನದಲ್ಲಿ ಕೂಡಲು ಅಂಜುತ್ತಾನೆ. ಆದರೆ ಕೆಲವು ತಿಂಗಳು ತರಬೇತಿ ಪಡೆದ ನಂತರ ಅವನೇ ವಿಮಾನ ನಡೆಸಬಹುದು. ಪ್ರತಿಯೊಬ್ಬನ ಮೇಲೆ ನಾವು ಹೊಣೆ ಹೊರಿಸಲು ಹೋಗುವುದು ತಪ್ಪಾದೀತು. ಆದರೆ ಆ ವ್ಯಕ್ತಿ ಇಲ್ಲವೇ ಸಂಸ್ಥೆಯ ಧೋರಣೆಯ ಹೊಣೆಯನ್ನು ನಾವು ಹೊತ್ತಿರಬಾರದು. ಭೀಷ್ಮ ದ್ರೋಣರಂತೆ ಒಡೆಯನಿಗೋಸ್ಕರ ದೇಹವನ್ನರ್ಪಿಸುವುದು ಕಾರ್ಯವೆಂದು ತಿಳಿದಿದ್ದರೂ ಆ ಕಾರ್ಯದ ಸಾಧು ಅಸಾಧುತೆಗಳ ಬಗ್ಗೆ ಅಭಿಪ್ರಾಯವು ಭೀಷ್ಮ ದ್ರೋಣರಲ್ಲಿರುವಂತೆ ಸ್ಪಷ್ಟವಾಗಿರಬೇಕು. ಬಳ್ಳಿಯಂತೆ ಯಾರೂ ಕಾಲ್ತೊಡಕಾಗಬಾರದು. ನಾಯಿಯಂತೆ ಯಾವ ಬಾಗಿಲಲ್ಲಿಯೂ ಸುಳಿದಿರಬಾರದು. ಮೋಡದಂತೆ ಗುರಿಯಿಲ್ಲದೆ ಗಾಳಿಯ ತೊತ್ತಾಗಬಾರದು. ನಿಲ್ಲಬೇಕಾದಲ್ಲಿ ನಿಲ್ಲುವ, ಉರುಳ ಬೇಕಾದಲ್ಲಿ ಉರುಳುವ ಗೋಲವಾಗಬೇಕು. ಇದೇ ನಿಜವಾದ ವ್ಯಕ್ತಿತ್ವ, ಈ ಕೇಂದ್ರದಲ್ಲಿಯೇ ವ್ಯಕ್ತಿ ಸಮಾಜಗಳ ಸಾಮರಸ್ಯದ ಬೀಜವಿದೆ.

ಪ್ರಶ್ನೆಗಳು :

ಅ) ನಿಜವಾದ ವ್ಯಕ್ತಿತ್ವ ಎಂಬುದು ಹೇಗಿರಬೇಕು?
**ಉತ್ತರ:** ಬಳ್ಳಿಯಂತೆ ಯಾರೂ ಕಾಲ್ತೊಡಕಾಗಬಾರದು. ನಾಯಿಯಂತೆ ಯಾವ ಬಾಗಿಲಲ್ಲಿಯೂ ಸುಳಿದಿರಬಾರದು. ಮೋಡದಂತೆ ಗುರಿಯಿಲ್ಲದೆ ಗಾಳಿಯ ತೊತ್ತಾಗಬಾರದು. ನಿಲ್ಲಬೇಕಾದಲ್ಲಿ ನಿಲ್ಲುವ, ಉರುಳ ಬೇಕಾದಲ್ಲಿ ಉರುಳುವ ಗೋಲವಾಗಬೇಕು. ಇದೇ ನಿಜವಾದ ವ್ಯಕ್ತಿತ್ವ

ಆ) ಭಯದ ಬೇರೆ ಬೇರೆ ಸನ್ನಿವೇಶಗಳನ್ನು ಪಟ್ಟಿ ಮಾಡಿ.
**ಉತ್ತರ:** ದಟ್ಟಡವಿಯಲ್ಲಿ ದಾರಿತಪ್ಪಿದ ಗೋವು, ಮುಚ್ಚಿದ ಕಣ್ಣುಗಳು, ಹಾರುತ್ತಿರುವ ಎದೆ, ಕತ್ತಲೆಯಲ್ಲಿ ಕಂಗೆಟ್ಟ ಶಿಶು, ಚಕ್ರವರ್ತಿಯ ಎದುರಿಗೆ ನ್ಯಾಯ ಸ್ಥಾನದಲ್ಲಿ ನಡುಗುತ್ತ ನಿಂತ ಅಪರಾಧಿ, ಬೇಟೆನಾಯಿ ಬೆನ್ನಟ್ಟಿದ ಮೊಲ ಇವು ಭಯದ ಬೇರೆ ಬೇರೆ ಸನ್ನಿವೇಶಗಳಾಗಿವೆ.

XIV ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1x5=5

**44.** ನಿಮ್ಮನ್ನು ಬೆಂಗಳೂರಿನ ಕರ್ನಾಟಕ ಪಬ್ಲಿಕ್ ಶಾಲೆಯ 'ಚಂದನಾ' ಎಂದು ಭಾವಿಸಿಕೊಂಡು ಶಾಲಾ ವಿದ್ಯಾರ್ಥಿಗಳಿಗೆ 'ಆರೋಗ್ಯ ತಪಾಸಣೆ' ಕೈಗೊಳ್ಳುವಂತೆ ಕೋರಿ 'ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ'ಗಳಿಗೊಂದು ಮನವಿ ಪತ್ರ ಬರೆಯಿರಿ.

**ಇವರಿಂದ,** **ದಿನಾಂಕ : 25.02.2022**
ಚಂದನಾ **ಸ್ಥಳ: ಬೆಂಗಳೂರು**
ಕರ್ನಾಟಕ ಪಬ್ಲಿಕ್ ಶಾಲೆ,
ಬೆಂಗಳೂರು

**ಇವರಿಗೆ,**
ವೈದ್ಯಾಧಿಕಾರಿಗಳು,
'ಪ್ರಾಥಮಿಕ ಆರೋಗ್ಯ ಕೇಂದ್ರ'
ಬೆಂಗಳೂರು

ಮಾನ್ಯರೇ,

**ವಿಷಯ : ಶಾಲಾ ವಿದ್ಯಾರ್ಥಿಗಳಿಗೆ 'ಆರೋಗ್ಯ ತಪಾಸಣೆ' ಕೈಗೊಳ್ಳುವಂತೆ ಕೋರಿ**

*****************************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ವಿಶ್ವಕ್ಕೆ ಕಂಟಕಪ್ರಾಯವಾಗಿ ಪರಿಣಮಿಸಿರುವ ಕರೋನಾ ವೈರಸ್ ಈಗಾಗಲೇ ಲಕ್ಷಾಂತರ ಮಂದಿಯನ್ನು ಬಲಿ ಪಡೆದಿದೆ. ಪದೇ ಪದೇ ವಿದ್ಯಾರ್ಥಿಗಳು ಅನಾರೋಗ್ಯದ ಕಾರಣ ನೀಡಿ ತರಗತಿಗಳಿಗೆ ಗೈರುಹಾಜರಾಗುತ್ತಿದ್ದು, ಈ ಹಿನ್ನೆಲೆಯಲ್ಲಿ ನಮ್ಮ ಕರ್ನಾಟಕ ಪಬ್ಲಿಕ್ ಶಾಲೆಯ ಶಾಲಾ ವಿದ್ಯಾರ್ಥಿಗಳಿಗೆ 'ಆರೋಗ್ಯ ತಪಾಸಣೆ' ಕೈಗೊಳ್ಳಬೇಕೆಂದು, ತಮ್ಮಲ್ಲಿ ವಿನಯಪೂರ್ವಕವಾಗಿ ಕೇಳಿಕೊಳ್ಳುತ್ತಿದ್ದೇನೆ.

**ವಂದನೆಗಳೊಂದಿಗೆ,**

**ಹೊರವಿಳಾಸ** ತಮ್ಮ ವಿಶ್ವಾಸಿ,
ಸಹಿ/-
(ಚಂದನಾ)

ಇವರಿಗೆ,
**ವೈದ್ಯಾಧಿಕಾರಿಗಳು,**
**'ಪ್ರಾಥಮಿಕ ಆರೋಗ್ಯ ಕೇಂದ್ರ'**
ಬೆಂಗಳೂರು

ಅಥವಾ

ನಿಮ್ಮನ್ನು ಚಾಮರಾಜನಗರ ಜಿಲ್ಲೆಯ ಕೊಳ್ಳೇಗಾಲದಲ್ಲಿನ 'ಸಾರ್ವಜನಿಕ ವಿದ್ಯಾರ್ಥಿನಿಲಯ'ದ ವಿದ್ಯಾರ್ಥಿ 'ಮದನ್' ಎಂದು ಭಾವಿಸಿಕೊಂಡು ವಿದ್ಯಾರ್ಥಿನಿಲಯದಲ್ಲಿ ಏರ್ಪಡಿಸಿರುವ ಪೋಷಕರ ಸಭೆಗೆ ಆಹ್ವಾನಿಸಿ, 'ಮೋಹನ್ ಕುಮಾರ್' ಎಂಬ ಹೆಸರಿನ ತಂದೆಯವರಿಗೆ ಒಂದು ಪತ್ರ ಬರೆಯಿರಿ.

**ಕ್ಷೇಮ** ಶ್ರೀ

**ಇಂದ,**
ಮದನ್
10ನೇ ತರಗತಿ
'ಸಾರ್ವಜನಿಕ ವಿದ್ಯಾರ್ಥಿನಿಲಯ'
ಕೊಳ್ಳೆಗಾಲ.
ಚಾಮರಾಜ ನಗರ ಜಿಲ್ಲೆ.

ಪೂಜ್ಯತೀರ್ಥರೂಪರವರಿಗೆ ನಿಮ್ಮ ಮಗ ಮಾಡುವ ಶಿರಸಾಷ್ಟಾಂಗ ಪ್ರಣಾಮಗಳು.


**********************************

ನಾನು ಇಲ್ಲಿ ಆರೋಗ್ಯವಾಗಿದ್ದೇನೆ. ಅಲ್ಲಿ ನೀವೆಲ್ಲರೂ ಕ್ಷೇಮವಾಗಿದ್ದೀರಿ ಎಂದು ಭಾವಿಸುತ್ತೇನೆ. ನನ್ನ ವಿದ್ಯಾಭ್ಯಾಸ ಉತ್ತಮವಾಗಿ ನಡೆಯುತ್ತಿದೆ. **ಪೂಜ್ಯ ತಾಯಿ ಹಾಗೂ ಹಿರಿಯ ಸಹೋದರ ಹಾಗೂ ಸಹೋದರಿಗೆ ಪ್ರಣಾಮಗಳು.** ದಿನಾಂಕ: 17–02–2022 ರಂದು ನಮ್ಮ ವಿದ್ಯಾರ್ಥಿನಿಲಯದಲ್ಲಿ ಪೋಷಕರ ಸಭೆಯನ್ನು ಏರ್ಪಡಿಸಿದ್ದಾರೆ. ಅಲ್ಲಿ ನಮ್ಮ ಕಲಿಕೆಯ ಲೋಪ–ದೋಷಗಳನ್ನು, ನಮ್ಮ ವಿದ್ಯಾಭ್ಯಾಸದ ಪ್ರಗತಿಯನ್ನು ತಿಳಿಸಿ, ಸೂಕ್ತ ಮಾರ್ಗದರ್ಶನ ನೀಡುವ ಕಾರ್ಯಕ್ರಮ ಮಿಇದಾಗಿದ್ದು, ನೀವು ತಪ್ಪದೇ ಬರಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಪ್ರಣಾಮಗಳೊಂದಿಗೆ,

**ಇಂತಿ ನಿಮ್ಮ ಮಗ**
ಸಹಿ/–
(ಮದನ್)

ಹೊರವಿಳಾಸ




**XV** ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆ ಇಲ್ಲದಂತೆ ಪ್ರಬಂಧ ಬರೆಯಿರಿ. **1x5=5**

**45. ಕೋವಿಡ್–19 ರ ಸಾಂಕ್ರಾಮಿಕ ರೋಗ ಹರಡದಂತೆ ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳು**

**ಪೀಠಿಕೆ:–** ಇಡೀ ಭೂಮಿಯನ್ನೇ ಅಲ್ಲೋಲ–ಕಲ್ಲೋಲ ಮಾಡಿದ ಈ ರೋಗದ ಭೀಕರತೆ ಅಷ್ಟೊಂದಿದೆಯಾ ಅನ್ನುವ ಮಟ್ಟಿಗೆ ಲಕ್ಷಾಂತರ ಮಂದಿಯನ್ನು ಬಲಿ ಪಡೆದಿದೆ. ಈ ರೋಗದ ಬಗ್ಗೆ ಮೊದಮೊದಲು ಅಷ್ಟೊಂದು ತೀವ್ರವಾಗಿ ಯಾರೂ ಚಿಂತಿಸಿರಲಿಲ್ಲ. ಆದರೆ ಇತ್ತೀಚೆಗೆ ಚಿಂತಿಸುತ್ತಲೇ ಹೋರಾಡಬೇಕಾದ ಪರಿಸ್ಥಿತಿ ಬಂದೊದಗಿದೆ. ಪ್ರಯಾಣ, ಸಂಪರ್ಕ, ಸಹವಾದಿಂದ ಇದು ಸಾಂಕ್ರಾಮಿಕವಾಗಿ ಹಬ್ಬಿತು. ಲಂಕಾದಹನದಂತೆ.

**ವಿಷಯ ವಿವರಣೆ:–** ಕೋವಿಡ್–19 (ಕರೋನಾ ವೈರಸ್)ಇದು ಮೊದಲ ಬಾರಿಗೆ ಚೀನಾದ ವುಹಾನ್‌ನಲ್ಲಿ ಪತ್ತೆಯಾಗಿದೆ. ಕೋವಿಡ್–19 (ಕರೋನಾ ವೈರಸ್) ವೈರಸ್ ಒಂದು ಬಗೆಯ ಪ್ರಾಣಿಹಾನಿ ಉಂಟು ಮಾಡುವಂತಹ ವೈರಸ್ ಇದಾಗಿದ್ದು, ಇದು ಮನುಷ್ಯನ ಸಹಿತ ಸಸ್ತನಿಗಳಲ್ಲಿ ಮುಖ್ಯವಾಗಿ ಶ್ವಾಸಕೋಶ ಹಾಗೂ ಉಸಿರಾಟದ ವ್ಯವಸ್ಥೆ ಮೇಲೆ ಗಂಭೀರ ತೊಂದರೆ ಉಂಟು ಮಾಡುತ್ತದೆ. ಈಗ ಪ್ರಾಣಿಗಳಿಂದ ಮನುಷ್ಯನಿಗೂ ಈ ಸೋಂಕು ತಗಲುತ್ತದೆ. 2019ರಲ್ಲಿ ಪತ್ತೆಯಾಗಿರುವ **Novel**

Corona Virus ಮೂಲಕ ಹರಡುವ ಒಂದು ಸಾಂಕ್ರಾಮಿಕ ಸೋಂಕಾಗಿದೆ. ಇದು ಕರೋನಾ ರೋಗಾಣುವಾದ SARS-COV-2 ನಿಂದ ಉಂಟಾಗುವ ಕರೋನಾ ರೋಗ–19. ಈ ರೋಗಾಣು ಇರುವ ವ್ಯಕ್ತಿಗಳಲ್ಲಿ ಹಲವರು ಯಾವುದೇ ತೊಂದರೆಗಳಿಲ್ಲದೇ ಸಾಮಾನ್ಯ ಅಥವಾ ಸ್ವಲ್ಪ ಪ್ರಮಾಣದ ಶ್ವಾಸಕೋಶದ ಸಮಸ್ಯೆಗಳನ್ನು ಅನುಭವಿಸಿ ಗುಣಮುಖರಾಗುತ್ತಾರೆ. ಆದರೆ ಈಗಾಗಲೇ ಆರೋಗ್ಯ ಸಂಬಂಧೀ ಸಮಸ್ಯೆಗಳನ್ನು ಹೊಂದಿರುವವರು (ಹೃದ್ರೋಗ, ಸಕ್ಕರೆ ಖಾಯಿಲೆ, ದೀರ್ಘಕಾಲದ ಶ್ವಾಸಕೋಶ ಸಮಸ್ಯೆ, ಕ್ಯಾನ್ಸರ್ ಇತ್ಯಾದಿ) ಹಾಗೂ ವಯೋವೃದ್ಧರಿಗೆ ತೀವ್ರತರ ಸಮಸ್ಯೆಯಾಗಿ ಕಾಡುತ್ತದೆ. ಜ್ವರ, ಕೆಮ್ಮು, ಉಸಿರಾಟದ ತೊಂದರೆ – ಇದರ ಸಾಮಾನ್ಯ ಲಕ್ಷಣಗಳು. **ಜ್ವರ, ಕೆಮ್ಮು & ಉಸಿರಾಟದ ತೊಂದರೆ ಇಲ್ಲದಿದ್ದರೆ ಕೋವಿಡ್–19ರ ಪರೀಕ್ಷೆ ಅಗತ್ಯವಿರುವುದಿಲ್ಲ.**

**ರೋಗದ ಲಕ್ಷಣಗಳು:**

- **ಜ್ವರ, ಗಂಟಲು ನೋವು, ಕೆಮ್ಮು, ಉಸಿರಾಟದ ತೊಂದರೆ.**
- **ಸಾಮಾನ್ಯವಾಗಿ ನೆಗಡಿ, ಫ್ಲೂ ಮುಂತಾದ ವೈರಲ್ ಸೋಂಕಿನ ಖಾಯಿಲೆಗಳಲ್ಲಿ ಕಂಡುಬರುವ ಲಕ್ಷಣಗಳೇ ಇಲ್ಲೂ ಕಂಡುಬರುತ್ತದೆ.**

**ಕರೋನಾ ಹರಡುವುದು ಬಗೆ:** ರೋಗವಿರುವವರು ಕೆಮ್ಮಿದರೆ, ಕೈಕುಲುಕುವಿಕೆ, ಯಾವುದೋ ವಸ್ತುವನ್ನು ಮುಟ್ಟಿ ಅಥವಾ ಪ್ರಾಣಿಗಳನ್ನು ಮುಟ್ಟಿ ಕೈ ತೊಳೆದುಕೊಳ್ಳದೆ ನಿಮ್ಮ ಮುಖ, ಬಾಯಿಗಳನ್ನು ಮುಟ್ಟಿದಾಗಲೂ ಈ ರೋಗ ಹರಡುವ ಸಾಧ್ಯತೆ ಇರುತ್ತದೆ. ಸಧ್ಯಕ್ಕೆ ಕೋವಿಡ್–19 ಸೋಂಕಿಗೀಡಾದವರ ಚಿಕಿತ್ಸೆಗೆ ಯಾವುದೇ ಔಷಧಿ/ ಲಸಿಕೆ ಲಭ್ಯವಿಲ್ಲ. (ಕೋವ್ಯಾಕ್ಸಿನ್, ಕೋವಿಶೀಲ್ಡ್ ಇಂಜಕ್ಷನ್‌ಗಳು ಪರಿಪೂರ್ಣ ಔಷಧಿಗಳಲ್ಲ, ರೋಗದ ತೀವ್ರತೆಯನ್ನು ಕಡಿಮೆ ಮಾಡಬಲ್ಲವು) **ಹಾಗಾಗಿ ನಾವು ಕೆಲವು ಮುಂಜಾಗ್ರತಾ ಕ್ರಮಗಳನ್ನು ಈ ಕೆಳಕಂಡಂತೆ ಅನುಸರಿಸಿದರೆ ಸೋಂಕನ್ನು ನಿಯಂತ್ರಿಸಬಹುದು.**

1. ಪ್ರತಿಯೊಬ್ಬರೂ ತಪ್ಪದೇ ಮಾಸ್ಕ್ ಧರಿಸಿಕೊಳ್ಳಬೇಕು.
2. ಫೇಸ್ ಮಾಸ್ಕ್(ಮುಖಗವಸು) ಧರಿಸುವಾಗ ಮೂಗು ಹಾಗೂ ಬಾಯಿಯನ್ನು ಕವರ್ ಮಾಡಿ. ಒಮ್ಮೆ ಧರಿಸಿದ ಬಳಿಕ ಆಗಾಗ ಮಾಸ್ಕ್ ಮುಟ್ಟಬೇಡಿ.
3. ವೈಯಕ್ತಿಕ ಸ್ವಚ್ಛತೆ & ನೈರ್ಮಲ್ಯ ಕಾಪಾಡಿಕೊಳ್ಳಿ, ವಿಶೇಷವಾಗಿ ಆಗಾಗ್ಗೆ ಸಾಬೂನಿನಿಂದ, ಶೇ.70% ಅಧಿಕವಿರುವ ಸ್ಯಾನಿಟೈಸರ್‌ಗಳಿಂದ ಕೈಗಳನ್ನು ತೊಳೆದುಕೊಳ್ಳುತ್ತಿರಬೇಕು.
4. ಕೆಮ್ಮುವಾಗ ಹಾಗೂ ಸೀನುವಾಗ ಮಾಸ್ಕ್ / ಕೈವಸ್ತ್ರ ಉಪಯೋಗಿಸಿ, ಹಾಗೂ ಮೊಣಕೈ ಅಡ್ಡ ಹಿಡಿಯಿರಿ, ಇನ್ನು ಬಾಯಿಗೆ ಅಡ್ಡವಾಗಿ ಬಳಸಿದ ಟಿಶ್ಯೂವನ್ನು ಕೂಡಲೇ ಕಸದ ಬುಟ್ಟಿಗೆ ಹಾಕಬೇಕು.
5. ಜ್ವರ, ಶೀತ ಇದ್ದಾಗ ಪ್ರಯಾಣ ಮಾಡಬೇಡಿ. ಕೆಮ್ಮುವಾಗ ಹಾಗೂ ಸೀನುವಾಗ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಉಗುಳಬೇಡಿ.
6. ರೋಗದ ಶಂಕೆಯಿದ್ದರೆ ಮನೆಯಲ್ಲಿಯೇ ಪ್ರತ್ಯೇಕವಾಗಿರಬೇಕು ಮತ್ತು ಮೂರು ಪದರಗಳುಳ್ಳ ಮಾಸ್ಕ್ ಧರಿಸಿ.
7. ಉಸಿರಾಟದ ತೊಂದರೆಯಾದಲ್ಲಿ ತಕ್ಷಣ ವೈದ್ಯರ ಸಲಹೆ ಪಡೆಯಿರಿ.
8. ಅನಾರೋಗ್ಯ ಇದ್ದವರಿಂದ ದೂರವಿರಿ. ಶೀತ, ನೆಗಡಿ ಇರುವವರಿಂದ ಬಲು ದೂರವಿದ್ದರೆ ಒಳಿತು.
9. ಅಸುರಕ್ಷಿತ ಕಾಡುಪ್ರಾಣಿಗಳ ಅಥವಾ ಸಾಕು ಪ್ರಾಣಿಗಳ ಜೊತೆ ಒಡನಾಟ ಬೇಡ.
10. ಹಸಿ, ಅರ್ಧಂಬರ್ಧ ಬೆಂದ ತಿನ್ನದೇ ಚೆನ್ನಾಗಿ ಬೇಯಿಸಿ ಉಪಯೋಗಿಸಬೇಕು.
11. ತೋಟಕ್ಕೆ, ಪ್ರಾಣಿಸಂತೆಗೆ ಮಾಂಸ ಮಾರುವ ಸ್ಥಳಕ್ಕೆ ಹೋಗಲೇಬೇಡಿ.
12. ಕಣ್ಣು, ಮೂಗು, ಬಾಯಿಯನ್ನು ಆಗಾಗ ಮುಟ್ಟಬೇಡಿ.
13. ನಿಯಮಿತವಾಗಿ ವ್ಯಾಯಾಮ/ಯೋಗ ಮಾಡುವುದು.
14. ಧ್ಯಾನ ಮಾಡುವುದು ಮತ್ತು ಮನೆಯಲ್ಲೇ ಪೂಜೆ, ನಮಾಜ್, ಪ್ರಾರ್ಥನೆ ಮಾಡುವುದು.
15. ಹೊರಗಿನಿಂದ ಬಂದವರೊಂದಿಗೆ ವ್ಯಕ್ತಿಗತ ಅಂತರ ಕಾಯ್ದುಕೊಳ್ಳುವುದು.
16. ಹೊರಗಿನಿಂದ ಪಾರ್ಸೆಲ್ ತಂದಂತಹ ಪದಾರ್ಥ ಹಾಗೂ ಆಹಾರವನ್ನು ಮುನ್ನೆಚ್ಚರಿಕೆವಹಿಸಿ ಬಳಸುವುದು.
17. ಮನೆಯಲ್ಲಿ ಇತರರೊಂದಿಗೆ ವ್ಯಕ್ತಿಗತ ಅಂತರ ಕಾಯ್ದುಕೊಂಡು ಆಟ ಆಡುವುದು, ಕಥೆ ಹೇಳುವುದು ಇತ್ಯಾದಿ ಚಟುವಟಿಕೆಗಳನ್ನು ಮಾಡುವುದು.
18. ಫೋನ್ ಅಥವಾ ಕಂಪ್ಯೂಟರ್‌ನ ಮೂಲಕ ಸ್ನೇಹಿತರ ಹಾಗೂ ಸಂಬಂಧಿಕರೊಂದಿಗೆ ಸಂಪರ್ಕದಲ್ಲಿರುವುದು.
19. ತಂಬಾಕು, ಆಲ್ಕೋಹಾಲ್ ತೆಗೆದುಕೊಳ್ಳುವ ಅಭ್ಯಾಸವಿದ್ದರೆ ಅದನ್ನು ನಿಲ್ಲಿಸುವುದು. **(ಅಗತ್ಯವಿದ್ದರೆ ವೈದ್ಯರ ಸಲಹೆ ಪಡೆಯುವುದು.)**
20. ಸಾಧ್ಯವಿದ್ದರೆ ಸಾಹಿತ್ಯ, ಕಾದಂಬರಿ, ಪತ್ರಿಕೆ ಇತ್ಯಾದಿಗಳನ್ನು ಓದುವ ಹವ್ಯಾಸ ಬೆಳೆಸಿಕೊಳ್ಳುವುದು.

ಇತ್ಯಾದಿಯಾಗಿ ಮುಂಜಾಗ್ರತಾ ಕ್ರಮಗಳನ್ನು ಅನುಸರಿಸುವುದರಿಂದ **ಕೋವಿಡ್-19 ರ ಸಾಂಕ್ರಾಮಿಕ ರೋಗ ಹರಡುವಿಕೆಯನ್ನು ಸಂಪೂರ್ಣವಾಗಿ ನಿಯಂತ್ರಿಸಬಹುದಾಗಿದೆ.**

**ಉಪಸಂಹಾರ:-** ನಾವು ಮಾಸ್ಕ್ ಧರಿಸುವುದರಿಂದ ಕರೋನಾ ವೈರಸ್ ಗಾಳಿ ಕಣಗಳ ಮೂಲಕ ನಮ್ಮ ಶ್ವಾಸಕೋಶದ ಒಳಗೆ ಹೋಗುವ ಸಾಧ್ಯತೆ ಕಡಿಮೆಯಾಗುತ್ತದೆ. ನಾವು ಹೊರಗಡೆ ಹೋದಾಗ ಮಾಸ್ಕ್ ಧರಿಸಿಕೊಂಡೇ ಹೋಗುವ ನಿರ್ಧಾರ ಮಾಡೋಣ. ಹಾಗಾಗಿ, ವೈರಸ್ ಒಳಗೆ ಹೋಗುವ ಸಾಧ್ಯತೆ ಕಡಿಮೆ ಮಾಡಿ ಗಾಳಿಯಲ್ಲಿ ಹರಡುವುದನ್ನು ತಡೆಯೋಣ. ನಮ್ಮನ್ನು ಹಾಗೂ ನಮ್ಮವರನ್ನು ಆರೋಗ್ಯದಿಂದ ಇರಿಸೋಣ. ದೇಶದಿಂದಲೇ ಕೋವಿಡ್-19 ವೈರಸ್‌ನ್ನು ಹೊಡೆದೋಡಿಸೋಣ.

**ಭಯ ಬೇಡ. ಎಚ್ಚರದಿಂದ ಇದ್ದರೆ ಸಾಕು ಅಲ್ಲವೇ?**

**ಅಥವಾ**

**** ಗ್ರಂಥಾಲಯಗಳ ಮಹತ್ವ:-**

**ಪೀಠಿಕೆ:-** ಗ್ರಂಥಗಳ ಆಲಯವೇ ಗ್ರಂಥಾಲಯ. ಈ ಗ್ರಂಥಾಲಯಗಳು ಎಂಬುದೊಂದು ಮಾನವನ ಸಾಮಾಜಿಕ ಜೀವನದ ಪ್ರಮುಖ ಭಾಗಗಳಾಗಿವೆ. ಗ್ರಂಥಾಲಯಗಳ ಗ್ರಂಥಗಳು ಮನುಷ್ಯನ ಜ್ಞಾನವನ್ನು ಹೆಚ್ಚಿಸುವ ಹಾಗೂ ಅಮೂಲ್ಯ ಸಮಯವನ್ನು ಸದುಪಯೋಗ ಮಾಡಿಕೊಳ್ಳುವ ಸಾಧನಗಳಾಗಿವೆ.

**ವಿಷಯ ವಿವರಣೆ:-** ಅಪಾರ ಜ್ಞಾನ ಸಂಪತ್ತನ್ನು ಹೊಂದಿರುವ ಗ್ರಂಥಗಳ ಆಲಯ(ಮನೆ)ಯೇ ಗ್ರಂಥಾಲಯ ಎಂದರ್ಥ. ಇಲ್ಲಿ ಎಲ್ಲಾ ಬಗೆಯ, ಸಮಸ್ತ ವಿಷಯಗಳ ಸಾವಿರಾರು ಪುಸ್ತಕಗಳು ದೊರೆಯುತ್ತವೆ.

**ಗ್ರಂಥಾಲಯಗಳ ಮಹತ್ವ:-** ಪುಟ್ಟ-ಪುಟ್ಟ ಮಕ್ಕಳ ಜ್ಞಾನ ಹಾಗೂ ಮನಸ್ಸು ವಿಕಾಸವಾಗಲು, ಹಿರಿಯರಿಗೆ ಸಮಯದ ಸದುಪಯೋಗವಾಗಲು ಸಹಕಾರಿ. ಯುವಕರಿಗೆ, ಸ್ಪರ್ಧಾರ್ಥಿಗಳಿಗೆ **ಜ್ಞಾನಸುಧೆ ನೀಡುವ ಜ್ಞಾನಕಾಶಿಯಾಗಿದೆ.** ಇದರಿಂದ ಹಲವಾರು ಜನರು ವಿವಿಧ ವಿಷಯ & ಕ್ಷೇತ್ರಗಳಲ್ಲಿ ಜಿಜ್ಞಾಸೆ ಹೊಂದಿ ಯಶಸ್ವಿಯಾಗಿದ್ದಾರೆ & ಯಶಸ್ವಿಯಾಗುತ್ತಿದ್ದಾರೆ. ಪುಸ್ತಕಗಳನ್ನು ಕೊಂಡು ಓದಲಾರದವರಿಗೆ, ದಿನನಿತ್ಯ ವಿದ್ಯಮಾನಗಳನ್ನು ತಿಳಿದುಕೊಳ್ಳಬೇಕೆಂದವರಿಗೆ ಜ್ಞಾನದೇಗುಲವಾಗಿದೆ. ಹಲವಾರು ವ್ಯಕ್ತಿಗಳ ವ್ಯಕ್ತಿತ್ವ & ಭವಿಷ್ಯವನ್ನು ಬದಲಿಸುವ ದಿವ್ಯತಾಣವಾಗಿದೆ.ಸಾಹಿತ್ಯ ವಲಯಕ್ಕೆ ಸೇರಿದವರಿಗೆ ಬೇಕಾದ ಎಲ್ಲಾ ಸಾಹಿತ್ಯ ಪ್ರಕಾರಗಳು ದೊರೆಯುವುದರಿಂದ ಸಹೃದಯಿಗಳಿಗೆ ಅಮೃತ ತಾಣವಾಗಿದೆ. ಇಂದಿನ ಮಾಹಿತಿ-ತಂತ್ರಜ್ಞಾನ ಯುಗದಲ್ಲೂ ಗ್ರಂಥಾಲಯದ ಮಹತ್ವ ಕಡಿಮೆಯಾಗಿಲ್ಲ ಮತ್ತು ಮುಂದೆಯೂ ಕಡಿಮೆಯಾಗದು.

**-ಹೀಗೆ ಬರೆಯುತ್ತಾ ಸಾಗಿದರೆ ಗ್ರಂಥಾಲಯದ ಮಹತ್ವ ಕಡಿಮೆಯೆನಿಸದು.**

ಗ್ರಂಥಗಳು & ಗ್ರಂಥಾಲಯದ ಮಹತ್ವ ಅರಿತು ನಮ್ಮ ಭವಿಷ್ಯವನ್ನು ಹಸನು ಮಾಡಿಕೊಳ್ಳಬೇಕು. ಗ್ರಂಥಾಲಯದಲ್ಲಿ ಪ್ರತಿದಿನ ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು. **"ಒಂದು ದೇವಸ್ಥಾನ ಕಟ್ಟಿಸಿದರೆ ನೂರಾರು ಭಿಕ್ಷುಕರು ಹುಟ್ಟುತ್ತಾರೆ. ಒಂದು ಗ್ರಂಥಾಲಯ ಕಟ್ಟಿದರೆ ನೂರಾರು ವಿದ್ವಾಂಸರು ಹುಟ್ಟುತ್ತಾರೆ" ಎಂದು ಡಾ. ಶ್ರೀ. ಬಾಬಾಸಾಹೇಬ್ ಅಂಬೇಡ್ಕರ್‌ರವರು** ಗ್ರಂಥಾಲಯದ ಮಹತ್ವವನ್ನು ಸುಂದರವಾಗಿ ಹೇಳಿದ್ದಾರೆ. ಗ್ರಂಥಾಲಯಗಳಿಲ್ಲದ ಶಾಲೆ-ಕಾಲೇಜುಗಳಿಲ್ಲ,ವಿಶ್ವ ವಿದ್ಯಾಲಯಗಳಂತೂ ಮೊದಲೇ ಇಲ್ಲ. **ಗ್ರಂಥಾಲಯದಲ್ಲಿ ಒಬ್ಬ ಗ್ರಂಥಪಾಲಕರಿರುತ್ತಾರೆ. ಅವರನ್ನು '<u>ಶಿಕ್ಷಕರ ಶಿಕ್ಷಕ</u>' ಎಂದು ಕರೆಯುತ್ತಾರೆ.** ಶಿಕ್ಷಕ ಪಾಠವನ್ನು ಬೋಧಿಸಿದರೆ, ಗ್ರಂಥಪಾಲಕ(ಕನ್ನಡ ಶಿಕ್ಷಕರೇ ಹೆಚ್ಚು) ಶಿಕ್ಷಕರಿಗೆ ಅವಶ್ಯಕ ಮತ್ತು ಸಂದರ್ಭೋಚಿತ ಪುಸ್ತಕಗಳನ್ನು ಒದಗಿಸುವುದರ ಮೂಲಕ ವಿದ್ಯಾರ್ಥಿಗಳ ಜ್ಞಾನಾಭಿವೃದ್ಧಿಗೆ ನೆರವಾಗುತ್ತಾನೆ. **'ಉತ್ತಮ ಗ್ರಂಥಗಳು ಮುಂದಿನ ಜನಾಂಗದ ಆಸ್ತಿ'** ಎಂಬುದು ಅನಾಮಿಕನ ನುಡಿ.

**ಉಪಸಂಹಾರ:-** ಗ್ರಂಥಾಲಯದಲ್ಲಿ ಪುಸ್ತಕಗಳನ್ನು ಪುಟಗಳನ್ನು ಕತ್ತರಿಸಿಕೊಳ್ಳಬಾರದು ಮತ್ತು ಕದಿಯಬಾರದು. ಕದಿಯುವುದಾದರೆ ಜ್ಞಾನವನ್ನು ಕದಿಯಬೇಕು. ಸ್ಪರ್ಧಾತ್ಮಕ ಪ್ರಪಂಚದಲ್ಲಿ ಜ್ಞಾನದ ಬಲದಿಂದ ಮುನ್ನುಗ್ಗಲು ಗ್ರಂಥಾಲಯಗಳು ಸಹಕಾರಿ.

-•-•-•-

Downloaded from scoringtarget.com

Click here for SSLC notes